ಜನಮನದ ದನಿ

ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ

05 ಏಪ್ರಿಲ್ 2026 ಭಾನುವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ : 26 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629

ಡೆಲ್ಲಿ ಕ್ಯಾಪಿಟಲ್ಸ್ ತಂಡವು ಸಮೀರ್ ರಿಜ್ವಿ ಅವರ ಅಮೋಘ ಬ್ಯಾಟಿಂಗ್ ನೆರವಿನಿಂದ ಬಲಿಷ್ಠ ಮುಂಬೈ ಇಂಡಿಯನ್ಸ್ ಎದುರು 6 ವಿಕೆಟ್‌ಗಳ ಜಯ ಸಾಧಿಸಿದೆ.

ಬುಡಕಟ್ಟು ಕ್ರೀಡಾ ಪ್ರತಿಭೆ: ನಮ್ಮ ರಾಷ್ಟ್ರೀಯ ಹೆಮ್ಮೆ » 2

ಕಾರಿನ ಬಣ್ಣವೂ, ದೇಶದ ಆರ್ಥಿಕತೆಯೂ » 3

ನವೋದಯ ವಿದ್ಯಾಸಂಸ್ಥೆಯಲ್ಲಿ ಪ್ರೀನರ್ಸರಿ ಆರಂಭ » 4

ಉಪ ಚುನಾವಣೆ ಕಾವು: ಕೈ-ಕಮಲ ಕೆಸರೆರಚಾಟ

ಅಖಾಡದಲ್ಲಿ ಪರಸ್ಪರ ವಾಗ್ದಾಳಿ: ದಿನೇ ದಿನೇ ರಂಗೇರುತ್ತಿದೆ ಚುನಾವಣಾ ಪ್ರಚಾರ

• ಪ್ರಜೋದಯ ವರದಿ

ಬೆಂಗಳೂರು: ಬಾಗಲಕೋಟೆ ಮತ್ತು ದಾವಣಗೆರೆ ದಕ್ಷಿಣ ಉಪ ಚುನಾವಣೆ ಕಣ ರಂಗೇರುತ್ತಿದೆ. ಕಣದಲ್ಲಿ ಮತದಾರರನ್ನು ಸೆಳೆಯಲು ಎರಡು ರಾಜಕೀಯ ಪಕ್ಷದ ನಾಯಕರು ಪ್ರಯತ್ನ ನಡೆಸುತ್ತಿದ್ದಾರೆ. ಬಿಜೆಪಿ ಮತ್ತು ಕಾಂಗ್ರೆಸ್ ನಾಯಕರು ಪರಸ್ಪರ ಕೆಸರೆರಚಾಟ ನಡೆಸುವ ಮೂಲಕ ಚುನಾವಣಾ ಪ್ರಚಾರ ನಡೆಸುತ್ತಿದ್ದಾರೆ.

ಕಾಂಗ್ರೆಸ್ ಸರ್ಕಾರದ ವಿರುದ್ಧ ಅಪಪ್ರಚಾರ ಮಾಡುತ್ತಿರುವ ಬಿಜೆಪಿಯವರಿಗೆ ಸೋಲಿನ ಭಯ ಕಾಡುತ್ತಿದೆ. ನಿರೀಕ್ಷೆಗೂ ಮೀರಿ ಜನಸ್ಪಂದನೆ ದೊರೆತಿದೆ. ಎಲ್ಲೆಡೆ ಅಭೂತಪೂರ್ವ ಸ್ಪಂದನೆ ಸಿಗುತ್ತಿದ್ದು, ಎರಡೂ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಗೆಲ್ಲಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಶನಿವಾರ ಬಾಗಲಕೋಟೆಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾಂಗ್ರೆಸ್ ಸರ್ಕಾರದ ಕಾರ್ಯಕ್ರಮಗಳು ಬಡವರಿಗಾಗಿ ರೂಪಿಸಲ್ಪಟ್ಟಿವೆ. ಎಲ್ಲಾ ಜಾತಿ, ಧರ್ಮ, ಭಾಷೆಗಳಿಗೆ ಸೇರಿದ ಜನರಿಗೆ ಕಾರ್ಯಕ್ರಮಗಳನ್ನು ಕೊಟ್ಟಿದ್ದೇವೆ. ಬಿಜೆಪಿ ಗ್ಯಾರಂಟಿ ಯೋಜನೆ ಗಳನ್ನು ವಿರೋಧಿಸುತ್ತಿದ್ದು, ಗ್ಯಾರಂಟಿ ಯೋಜನೆಗಳು ಸಾಮಾಜಿಕ ಬದ್ಧತೆಯನ್ನು ಒದಗಿಸುವ ಹೂಡಿಕೆ

ಯಾಗಿದೆ. ಅಭಿವೃದ್ಧಿಯೆಂದರೆ ಕೇವಲ ರಸ್ತೆ, ಸೇತುವೆ, ಕಟ್ಟಡಗಳು ಮಾತ್ರವಲ್ಲ, ಆರ್ಥಿಕ ಹಾಗೂ ಸಾಮಾಜಿಕ ಭದ್ರತೆ ಒದಗಿಸುವುದು ಕೂಡ ಆಗಿದೆ ಎಂದು ಹೇಳಿದರು.

ಸಾಮಾಜಿಕ ಯೋಜನೆಗಳನ್ನು ಘೋಷಿಸಿದ ಮೇಲೆ ಬಿಜೆಪಿ ಅಂದಿನಿಂದ ಇಂದಿನವರೆಗೆ ವಿರೋಧಿಸುತ್ತಲೇ ಬಂದಿದೆ. ಪ್ರಧಾನಿ ನರೇಂದ್ರ ಮೋದಿ ಅವರು ಸೇರಿ ಎಲ್ಲರೂ ರಾಜ್ಯ ಆರ್ಥಿಕವಾಗಿ ದಿವಾಳಿಯಾಗುತ್ತದೆಂದು ಹೇಳಿಕೊಂಡು ಬಂದಿದ್ದಾರೆ. ಕಳೆದ ಮೂರು ವರ್ಷಗಳಿಂದ ಗ್ಯಾರಂಟಿ ಯೋಜನೆಗಳು ಜಾರಿಯಲ್ಲಿದ್ದು 2026ರ ಮಾ.24ರವರೆಗೆ 1.31 ಲಕ್ಷ ಕೋಟಿ ರೂ. ಗಳನ್ನು ಗ್ಯಾರಂಟಿಗಳಿಗೆ ಕೊಟ್ಟಿದ್ದೇವೆಂದು ತಿಳಿಸಿದರು.

ಬಿಜೆಪಿ ಮತಗಳು ಕಾಂಗ್ರೆಸ್‌ಗೆ: ಡಿಕೆಶಿ

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಮಾತನಾಡಿ, ದಾವಣಗೆರೆ ದಕ್ಷಿಣ ಹಾಗು ಬಾಗಲಕೋಟೆ ವಿಧಾನಸಭಾ ಕ್ಷೇತ್ರಗಳಲ್ಲಿ ಕಳೆದ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಬಂದ ಮತಕ್ಕಿಂತ ಈ ಬಾರಿಯ ಉಪಚುನಾವಣೆಯಲ್ಲಿ ಹೆಚ್ಚು ಮತ ಬೀಳಲಿದ್ದು, ನಮ್ಮ ಅಭ್ಯರ್ಥಿಗಳು ಹೆಚ್ಚು ಮತಗಳ ಅಂತರದಲ್ಲಿ ಗೆಲ್ಲಲಿದ್ದಾರೆ. ನಮ್ಮ ಕಾರ್ಯಕರ್ತರು ಉತ್ತಮವಾಗಿ ಕೆಲಸ ಮಾಡುತ್ತಿದ್ದಾರೆಂದರು.

ಬಿಜೆಪಿ ಅಭ್ಯರ್ಥಿಗಳಿಗೆ ಗೆಲುವು: ಹೆಚ್‌ಡಿಕೆ

ರಾಜ್ಯದಲ್ಲಿ ಅಧಿಕಾರದಲ್ಲಿರುವ ಕಾಂಗ್ರೆಸ್ ಜನರ ವಿಶ್ವಾಸ ಕಳೆದುಕೊಂಡಿದ್ದು, ಉಪ ಚುನಾವಣೆಯಲ್ಲಿ 2 ಕ್ಷೇತ್ರಗಳಲ್ಲೂ ಬಿಜೆಪಿ ಅಭ್ಯರ್ಥಿಗಳು ಗೆಲುವು ಸಾಧಿಸಲಿದ್ದಾರೆಂದು ಜೆಡಿಎಸ್ ರಾಜ್ಯಾಧ್ಯಕ್ಷ ಹೆಚ್.ಡಿ.ಕುಮಾರಸ್ವಾಮಿ ಅವರು ವಿಶ್ವಾಸ ವ್ಯಕ್ತಪಡಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಉಪಚುನಾವಣೆಯನ್ನು ಎರಡು ಪ್ರಮುಖ ಪಕ್ಷಗಳು ಅತ್ಯಂತ ಪ್ರತಿಷ್ಠೆಯಾಗಿ ತೆಗೆದುಕೊಂಡಿವೆ. ಬಿಜೆಪಿ ಹಾಗು ಜೆಡಿಎಸ್ ಮೈತ್ರಿಯೊಂದಿಗೆ ಎರಡು ಕ್ಷೇತ್ರಗಳಲ್ಲಿ ಬಿಜೆಪಿ ಅಭ್ಯರ್ಥಿಗಳು ಗೆಲುವು ಸಾಧಿಸಲಿದ್ದಾರೆಂದು ಹೇಳಿದರು.

ಕಾಂಗ್ರೆಸ್‌ಗೆ ಜನ ಕೈ ಕೊಡುವುದು ನಿಶ್ಚಿತ: ಅಶೋಕ್

ಸಿದ್ದರಾಮಯ್ಯ ಅವರ ನಿಜ ಬಣ್ಣ ಮೈಸೂರಿನಲ್ಲಿ ಗೊತ್ತಾಗಿ ಅಲ್ಲಿನ ಮತದಾರರು ಸೋಲಿಸಿದರು. ಆಗ ಬಾದಾಮಿಗೆ ಓಡಿ ಬಂದರು. ಬಾದಾಮಿ ಕೈ ಹಿಡಿಯಿತು. ಇಲ್ಲಿಗೂ ಕೈ ಕೊಟ್ಟು ಓಡಿ ಹೋದರು. ಈಗ ಮತ್ತೆ ಬಾಗಲಕೋಟೆಗೆ ಬಂದಿದ್ದಾರೆ. ಇಲ್ಲಿಗೂ ಕೈ ಕೊಡುತ್ತಾರೆಂದು ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಅವರು ವ್ಯಂಗ್ಯವಾಡಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಿದ್ದರಾಮಯ್ಯ ಅವರು ಚುನಾವಣೆಗೆ ಬಾದಾಮಿಗೆ ಬಂದಿದ್ದರು. ಈಗ ಮತ್ತೆ ಬಂದಿದ್ದಾರೆ. ಬಾದಾಮಿ ಹಾಲು ಕುಡಿದು, ಬಿರಿಯಾನಿ ತಿಂದು ಟಾಟಾ ಬಾಯ್ ಬಾಯ್ ಹೇಳಿದರು. ಇನ್ನು ಎರಡು ವರ್ಷದಲ್ಲಿ ಅಭಿವೃದ್ಧಿಯ ಮಳೆ ಸುರಿಸುತ್ತೇನೆಂದು ಹೇಳುತ್ತಿದ್ದಾರೆ. ಮೂರು ವರ್ಷ ನಿಮ್ಮದೇ ಶಾಸಕರು ಬಾಗಲಕೋಟೆಯಲ್ಲಿ ಇದ್ದಾಗ ಆಗ ನಿಮ್ಮ ಶಿಷ್ಯ ಏನು ಅಭಿವೃದ್ಧಿ ಮಾಡಿದರು ಎಂದು ಪ್ರಶ್ನಿಸಿದರು.

ಹಿಂದೂ ದಂಪತಿ ಮೇಲೆ ಹಲ್ಲೆ ಖಂಡಿಸಿ ಪ್ರತಿಭಟನೆ

• ಪ್ರಜೋದಯ ವರದಿ

ಹಾಸನ: ನಗರದಲ್ಲಿ ಶುಕ್ರವಾರ ಸಂಜೆ ಹಿಂದೂ ದಂಪತಿ ಮೇಲೆ ಮುಸ್ಲಿಂ ಸಮುದಾಯದವರು ನಡೆಸಿದ ಹಲ್ಲೆ ಖಂಡಿಸಿ ಶನಿವಾರ ಪ್ರತಿಭಟನೆ ನಡೆಸಲಾಯಿತು.

ಘಟನೆ ಖಂಡಿಸಿ ಹಿಂದೂಪರ ಸಂಘಟನೆಗಳು ಕರೆ ನೀಡಿದ್ದ ಬಂದ್‌ಗೆ ಸಾರ್ವಜನಿಕರು ಸ್ವಯಂ ಪ್ರೇರಿತವಾಗಿ ಬೆಂಬಲ ವ್ಯಕ್ತಪಡಿಸಿದರು. ಅಂಗಡಿ ಮುಂಗಟ್ಟುಗಳನ್ನು ಬಂದ್ ಮಾಡಿ ಘಟನೆಯನ್ನು ಖಂಡಿಸಲಾಯಿತು. ರಾಷ್ಟ್ರೀಯ ಹೆದ್ದಾರಿಯಲ್ಲಿ ವಾಹನಗಳ ಸಂಚಾರಕ್ಕೆ ವ್ಯತ್ಯಯವಾಗಿ ಪ್ರಯಾಣಿಕರು ಪರದಾಡಿದರು. ರಸ್ತೆ ಮಧ್ಯೆ ಜಮಾಯಿಸಿದ ಪ್ರತಿಭಟನಾನಿರತರ ಮನವೊಲಿಸಲು ಪೊಲೀಸರು ಹರಸಾಹಸಪಟ್ಟರು.

ಬಸವೇಶ್ವರ ವೃತ್ತದಲ್ಲಿ ಜೆಡಿಎಸ್ ಮುಖಂಡ ಎನ್.ಆರ್.ಸಂತೋಷ್ ಅವರು ಮಾತನಾಡಿ, ಬಹು ಸಂಖ್ಯಾತರ ಒಗ್ಗಟ್ಟಿನ ಕೊರತೆ ಲಾಭ ಪಡೆದಿರುವ ಸಮಾಜ ವಿರೋಧಿ ಗೂಂಡಾಗಳು ದೇವಾಲಯಕ್ಕೆ ತೆರಳಿ ಬರುತ್ತಿದ್ದ ದಂಪತಿ ಮೇಲೆ ಹಲ್ಲೆ ಮಾಡಿರುವುದು ಖಂಡನೀಯ. ಹಲ್ಲೆಯ ಸಮಗ್ರ

ದೃಶ್ಯ ಮೊಬೈಲ್ ಕ್ಯಾಮರಾದಲ್ಲಿ ಸೆರೆಯಾಗಿದೆ. ಹೀಗಿದ್ದರೂ ಪೊಲೀಸರು ಆರೋಪಿಗಳನ್ನು ಇದೂವರೆಗೂ ಬಂಧಿಸಿಲ್ಲ. ನ್ಯಾಯ ದೊರಕಿಸಬೇಕಿರುವ ಆರಕ್ಷಕ ಇಲಾಖೆ ಯಾರ ಕಪಿಮುಷ್ಟಿಯಲ್ಲಿದೆ ಎಂಬುದನ್ನು ಬಹಿರಂಗಪಡಿಸಬೇಕು. ಪದೇ ಪದೆ ಇಂತಹ ಘಟನೆ ಗಳು ಮರುಕಳಿಸುತ್ತಿರುವುದು ಕಾನೂನು ಸುವ್ಯವಸ್ಥೆ ಬಗ್ಗೆ ಜನರಿಗೆ ನಂಬಿಕೆ ಕಡಿಮೆಯಾಗಲಿದೆ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕೆಂದರು.

ಗೂಂಡಾಗಿರಿ ಪ್ರದರ್ಶನ ಮಾಡಿದ ನಗರಸಭೆ ಮಾಜಿ ಅಧ್ಯಕ್ಷ ಸಮೀವುಲ್ಲಾ ಪುತ್ರ ಹಾಗು ಆತನ ಸಹಚರರನ್ನು ತಕ್ಷಣ ಬಂಧಿಸಬೇಕು. ರಾಜಕೀಯ ಒತ್ತಡಕ್ಕೆ ಮಣಿದು ನಿರ್ಲಕ್ಷ್ಯ ತೋರಿದರೆ ಅರಸೀಕೆರೆ ತಾಲ್ಲೂಕು ಬಂದ್‌ಗೆ ಕರೆ ನೀಡಲಾಗುವುದೆಂದು ಎಚ್ಚರಿಸಿದರು.

ಬಿಜೆಪಿ ಮುಖಂಡ ಜಿವಿಟಿ ಬಸವರಾಜು ಅವರು ಮಾತನಾಡಿ, ಶಾಂತಿ, ಸುವ್ಯವಸ್ಥೆ ಕಾಪಾಡುವ ನಿಟ್ಟಿನಲ್ಲಿ ಪೊಲೀಸರ ವೈಫಲ್ಯ ಸಾಬೀತಾಗಿದೆ. ಇಲಾಖೆಯಲ್ಲಿ ದಶಕಗಳಿಂದ ಬೀಡು ಬಿಟ್ಟಿರುವ ಕೆಲ ಇಲಾಖೆ ಸಿಬ್ಬಂದಿ ಪ್ರಕರಣ ದಾಖಲಿಸುವ ಬದಲು » ನಾಲ್ಕನೇ ಪುಟದಲ್ಲಿ

ಜಿಲ್ಲೆಯಲ್ಲಿ ಅಕ್ರಮ ಗ್ಯಾಸ್ ರೀಫಿಲ್ಲಿಂಗ್ ದಂಧೆ

ಗೃಹಬಳಕೆ ಅನಿಲ ವಾಣಿಜ್ಯ ಸಿಲಿಂಡರ್‌ಗೆ ವರ್ಗ | ಕಾಳಸಂತೆಯಲ್ಲಿ ದುಪ್ಪಟ್ಟು ಬೆಲೆಗೆ ಮಾರಾಟ

- ಕೆ.ಪಿ.ಸಾಗರ್ ರಾಜು

• ಪ್ರಜೋದಯ ವರದಿ

ಹಾಸನ: ಮಧ್ಯಪ್ರಾಚ್ಯದಲ್ಲಿ ನಡೆಯುತ್ತಿರುವ ಯುದ್ಧದ ಪರಿಣಾಮ ಜಿಲ್ಲೆಯಲ್ಲಿ ಅಡುಗೆ ಅನಿಲ ಸಿಲಿಂಡರ್‌ಗಳ ಕೊರತೆ ತೀವ್ರವಾಗಿ ಕಾಡುತ್ತಿದೆ. ಅದರ ನಡುವೆ ಅಕ್ರಮ ಗ್ಯಾಸ್ ರೀಫಿಲ್ಲಿಂಗ್ ದಂಧೆ ತಲೆ ಎತ್ತಿದ್ದು, ಗೃಹ ಬಳಕೆ ಸಿಲಿಂಡರ್‌ಗಳ ಅನಿಲವನ್ನು, ವಾಣಿಜ್ಯ ಸಿಲಿಂಡರ್‌ಗಳಿಗೆ ಭರ್ತಿ ಮಾಡಿ ಕಾಳಸಂತೆಯಲ್ಲಿ ದುಪ್ಪಟ್ಟು ಬೆಲೆಗೆ ಮಾರಾಟ ಮಾಡಲಾಗುತ್ತಿದೆ.

ಜಿಲ್ಲೆಯ ವಿವಿಧ ಭಾಗಗಳಲ್ಲಿ ಗೃಹ ಬಳಕೆಯ ಅಡುಗೆ ಸಿಲಿಂಡರ್‌ಗಳನ್ನು ವಾಣಿಜ್ಯ ಸಿಲಿಂಡರ್‌ಗಳಿಗೆ ಅಕ್ರಮವಾಗಿ ರೀಫಿಲ್ಲಿಂಗ್ ಮಾಡುತ್ತಿರುವುದು ಬೆಳಕಿಗೆ ಬಂದಿದೆ. ಈ ಬಗ್ಗೆ ಕಠಿಣ ಕ್ರಮ ಕೈಗೊಂಡಿರುವ ಜಿಲ್ಲಾಡಳಿತ, ಕೆಲವು ಸ್ಥಳಗಳಲ್ಲಿ ದಾಳಿ ನಡೆಸಿ ಅಕ್ರಮದಲ್ಲಿ ತೊಡಗಿಕೊಂಡಿದ್ದ12 ಮಂದಿ ವಿರುದ್ಧ ಎಫ್‌ಐಆರ್ ದಾಖಲಿಸಿದೆ.

ಈ ದಂಧೆಯಿಂದ ಗೃಹ ಬಳಕೆಯ ಸಿಲಿಂಡರ್‌ಗಳ ಲಭ್ಯತೆ ಮತ್ತಷ್ಟು ಕುಂಠಿತವಾಗಿದೆ. ಪ್ರತಿನಿತ್ಯ ಅಡುಗೆ ಅನಿಲ ಸಿಲಿಂಡರ್ ಪಡೆಯಲು ಜನರು ಗ್ಯಾಸ್ ಏಜೆನ್ಸಿಗಳ ಮುಂದೆ ಸರದಿ ಸಾಲಿನಲ್ಲಿ ನಿಂತರೂ ಸಿಲಿಂಡರ್‌ಗಳು ಲಭ್ಯವಾಗುತ್ತಿಲ್ಲ. ಬುಕ್ಕಿಂಗ್ ಮಾಡಿದ ನಂತರವೂ ಹಲವು ದಿನಗಳ ಕಾಲ ವಿತರಣೆ ವಿಳಂಬವಾಗುತ್ತಿದೆ. ಗ್ರಾಮೀಣ ಭಾಗಗಳಲ್ಲಿ ಪರಿಸ್ಥಿತಿ ಇನ್ನಷ್ಟು ಗಂಭೀರವಾಗಿದ್ದು, ಜನರು ಮತ್ತೆ ಕಟ್ಟಿಗೆಯ ಒಲೆ ಅಥವಾ ಪರ್ಯಾಯ ಇಂಧನಗಳತ್ತ ಮುಖ ಮಾಡುತ್ತಿದ್ದಾರೆ.

ವಾಣಿಜ್ಯ ಸಿಲಿಂಡರ್ ಕೊರತೆಯಿಂದ ಹಲವು ಸಣ್ಣ-ಮಧ್ಯಮ ಹೋಟೆಲ್‌ಗಳು ಕಾರ್ಯಾಚರಣೆ ನಿಲ್ಲಿಸಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಕೆಲವರು ತಾತ್ಕಾಲಿಕವಾಗಿ ಸೌದೆ ಒಲೆ ಬಳಸಿ ವ್ಯವ ಹಾರ ನಡೆಸಲು ಮುಂದಾಗಿದ್ದಾರೆ. ಇನ್ನು ಕೆಲವರು ಹೋಟೆಲ್ ಮುಚ್ಚಲಾಗದೆ ಅನಿವಾರ್ಯವಾಗಿ ಕಾಳಸಂತೆಯಲ್ಲಿ ದುಬಾರಿಯಾಗಿ ಸಿಗುವ ಸಿಲಿಂಡರ್ ಕೊಂಡುಕೊಳ್ಳುತ್ತಿದ್ದಾರೆ.

ಸಿಲಿಂಡರ್ ಸ್ಫೋಟದ ಆತಂಕ

ಅಕ್ರಮ ರೀಫಿಲ್ಲಿಂಗ್ ಪ್ರಕ್ರಿಯೆ ಯಾವುದೇ ಸುರಕ್ಷತಾ ಮಾನದಂಡಗಳನ್ನು ಪಾಲಿಸದೆ ನಡೆಯುತ್ತಿರುವುದರಿಂದ ಸ್ಫೋಟದ ಅಪಾಯ ಹೆಚ್ಚಾಗಿದೆ. ಇಂತಹ ಅನಧಿಕೃತ ಗ್ಯಾಸ್ ವರ್ಗಾವಣೆಗಳಿಂದ ಜೀವ ಮತ್ತು ಆಸ್ತಿ ಹಾನಿ ಸಂಭವಿಸುವ ಸಾಧ್ಯತೆ ಇದೆ. ಹೀಗಾಗಿ ಅಕ್ರಮ ಚಟುವಟಿಕೆಗಳ ಬಗ್ಗೆ ಮಾಹಿತಿ ಇದ್ದಲ್ಲಿ ಸಾರ್ವಜನಿಕರು ತಕ್ಷಣ ತಿಳಿಸಲು ಮನವಿ ಮಾಡಿದ್ದಾರೆ. ಗ್ಯಾಸ್ ಸಿಲಿಂಡರ್‌ಗಳನ್ನು ಕೇವಲ ಏಜೆನ್ಸಿಗಳಿಂದಲೇ ಪಡೆಯಬೇಕು ಹಾಗು ಅನಧಿಕೃತ ಮಾರಾಟಗಾರರಿಂದ ಖರೀದಿ ಮಾಡಬಾರದೆಂದು ಜಿಲ್ಲಾಡಳಿತ ಸೂಚಿಸಿದೆ.

ಅದನ್ನೇ ಬಂಡವಾಗಿ ಮಾಡಿಕೊಂಡಿರುವ ಗ್ಯಾಸ್ ಸಾಗಣೆದಾರರು, ಮಧ್ಯ ವರ್ತಿಗಳು ಗೃಹ ಬಳಕೆ ಅನಿಲವನ್ನು ವಾಣಿಜ್ಯ ಸಿಲಿಂಡರ್‌ಗಳಿಗೆ ರೀಫಿಲ್ಲಿಂಗ್ ಮಾಡಿ, ಹೋಟೆಲ್, ವಾಣಿಜ್ಯ ಬಳಕೆಗೆ 4,000 ರಿಂದ 4,500ರೂ. ಗೆ ಕಾಳ ಸಂತೆಯಲ್ಲಿ ಮಾರಾಟ ಮಾಡಿ ಲಾಭ ಪಡೆದುಕೊಳ್ಳುತ್ತಿದ್ದಾರೆ.

ಕ್ರಮ ಲೆಕ್ಕಿಸದೆ ಅಕ್ರಮ

ಜಿಲ್ಲಾಧಿಕಾರಿ ನಿರ್ದೇಶನದಂತೆ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ, ಪೊಲೀಸ್ ಇಲಾಖೆ ಹಾಗು ತೂಕಮಾಪನ ಇಲಾಖೆ ಜಂಟಿಯಾಗಿ ತಪಾಸಣೆ ನಡೆಸಿ, ಈಗಾಗಲೇ ಹಲವು ಪ್ರಕರಣಗಳು ದಾಖಲಾಗಿವೆ. ಅಕ್ರಮವಾಗಿ ಗ್ಯಾಸ್ ಸಂಗ್ರಹಣೆ ಮತ್ತು ರೀಫಿಲ್ಲಿಂಗ್ ಮಾಡುತ್ತಿದ್ದವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲು ಜಿಲ್ಲಾಡಳಿತ ಮುಂದಾಗಿದೆ. ಇದ್ಯಾವುದನ್ನೂ ಲೆಕ್ಕಿಸದೆ ಹಣದಾಸೆಗಾಗಿಅಕ್ರ ಮವಾಗಿ ಅಪಾಯ ಕಾರಿಯಾಗಿ ಗ್ಯಾಸ್ ರೀಫಿಲ್ಲಿಂಗ್ ದಂಧೆ ನಡೆಯುತ್ತಿದೆ.

ಪರಿಹಾರ ಕ್ರಮಗಳ ಅವಶ್ಯಕತೆ

ಗ್ಯಾಸ್ ಸಮಸ್ಯೆ ಪರಿಸ್ಥಿತಿ ನಿಯಂತ್ರಣಕ್ಕೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸರಬರಾಜು ಹೆಚ್ಚಿಸುವುದು, ವಿತರಣಾ ವ್ಯವಸ್ಥೆ ಸುಧಾರಿಸಲು ಕ್ರಮ ಕೈಗೊಳ್ಳಬೇಕು. ಕಳ್ಳಸಂತೆಯಲ್ಲಿ ರೀಫಿಲ್ಲಿಂಗ್ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳು ವುದು ಅವಶ್ಯಕ.ಇಲ್ಲದಿದ್ದರೆ ಸಾಮಾನ್ಯ ಜನರ ದಿನನಿತ್ಯ ಜೀವನದ ಮೇಲೆ ಇನ್ನಷ್ಟು ಪರಿಣಾಮ ಬೀರಲಿದೆ ಎಂದು ಸಾರ್ವಜನಿಕರು ಆರೋಪಿಸಿದ್ದಾರೆ.

> **ಅಡುಗೆ ಸಿಲಿಂಡರ್‌ಗಳ ಅನಿಲವನ್ನು ವಾಣಿಜ್ಯ ಬಳಕೆ ಸಿಲಿಂಡರ್‌ಗಳಿಗೆ ಅಕ್ರಮವಾಗಿ ರೀಫಿಲ್ಲಿಂಗ್ ಮಾಡುತ್ತಿರುವುದು ನಮ್ಮ ಗಮನಕ್ಕೆ ಬಂದಿದೆ. ಈ ಬಗ್ಗೆ ತಪಾಸಣೆ ನಡೆಸಿ 12 ಮಂದಿ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಅಕ್ರಮ ತಡೆಯಲು ಜಿಲ್ಲಾಡಳಿತ ಕಠಿಣ ಕ್ರಮ ಕೈಗೊಂಡಿದೆ. ಸಿಲಿಂಡರ್ ಸಮಸ್ಯೆ ನಿವಾರಣೆಗೆ ಶೀಘ್ರವೇ ಗ್ಯಾಸ್ ಏಜೆನ್ಸಿ ಮಾಲೀಕರ ಸಭೆ ಕರೆದು ಚರ್ಚಿಸಿ ಪರಿಹಾರ ಕಂಡುಕೊಳ್ಳಲಾಗುವುದು.**
> **-ಕೆ.ಎಸ್.ಲತಾಕುಮಾರಿ, ಜಿಲ್ಲಾಧಿಕಾರಿ**

ಪ್ರಜಾಪ್ರಭುತ್ವದ 4ನೇ ಅಂಗವಾಗಿ ಮಾಧ್ಯಮ ಕಾರ್ಯ | ವಕೀಲ ಸೂರ್ಯ ಮುಕುಂದರಾಜ್

ಅಭಿವ್ಯಕ್ತಿ ಸ್ವಾತಂತ್ರ್ಯ ದುರುಪಯೋಗ ಆಗಬಾರದು

• ಪ್ರಜೋದಯ ವರದಿ

ಹಾಸನ: ಭಾರತ ಸಂವಿಧಾನ 19ನೇ ವಿಧಿಯೂ ಪ್ರತಿಯೊಬ್ಬರಿಗೂ ಅಭಿವ್ಯಕ್ತಿ ಸ್ವಾತಂತ್ರ್ಯ ನೀಡಿದೆ. ಎಲ್ಲರಿಗೂ ಇರುವಷ್ಟೇ ಸ್ವಾತಂತ್ರ್ಯ ಇದೆ ಹೊರತು ವಿಶೇಷ ಸವಲತ್ತುಗಳಿಲ್ಲ ಎಂದು ಖ್ಯಾತ ವಕೀಲ ಸೂರ್ಯ ಮುಕುಂದರಾಜ್ ಅವರು ಹೇಳಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದಲ್ಲಿ ಸಾಂಸ್ಕೃತಿ ಸಮಿತಿಯ ಸ್ಟಡಿ ವಿತ್ ಸೊಸೈಟಿ ಪರಿಕಲ್ಪನೆಯಡಿ ನಡೆದ ಮಾನನಷ್ಟ ಮೊಕದ್ದಮೆ ಹಾಗು ಸಾರ್ವಜನಿಕ ಹಿತಾಸಕ್ತಿಗಳ ಜೊತೆ ಪತ್ರಿಕಾ ರಂಗ ವಿಷಯ ಕುರಿತು ಮಾತನಾಡಿದ ಅವರು, 19ನೇ ವಿಧಿಯ 66 ಹಾಗು 67ನೇ ಕಲಂ ಅಡಿ ಕೆಲವು ನಿಬಂಧನೆಗಳನ್ನು ಹೇರಲಾಗಿತ್ತು. 2012ರಲ್ಲಿ ಬಾಳಾ ಸಾಹೇಬ್ ಠಾಕ್ರೆ ನಿಧನರಾದ

ವೇಳೆ ಮಹಿಳೆಯರಿಬ್ಬರು ಸಾಮಾಜಿಕ ಜಾಲತಾಣದಲ್ಲಿ ಅಸಭ್ಯ ಪದಗಳಿಂದ ಪ್ರತಿ ಕ್ರಿಯಿಸಿದ್ದರೆಂಬ ಕಾರಣಕ್ಕೆ ಅವರನ್ನು ಬಂಧಿಸಲಾಗಿತ್ತು. ನಂತರ ಈ ಪ್ರಕರಣ ದೇಶಾದ್ಯಂತ ಚರ್ಚೆಗೀಡಾದ ಪರಿಣಾಮ 2015ರಲ್ಲಿ 66ಎ ಕಲಂ ಅನ್ನು ರದ್ದು ಮಾಡಲಾಯಿತು. ಬಹುಶ: 66ಎ ಕಲಂ ರದ್ದುಪಡಿಸದಿದ್ದರೆ ಪತ್ರಕರ್ತರಿಗೆ ಬರೆಯುವ ಸ್ವಾತಂತ್ರ್ಯ ಇನ್ನೂ ಕಠಿಣವಾಗಿರುತ್ತಿತ್ತು ಎಂದು ಅಭಿಪ್ರಾಯಪಟ್ಟರು.

ಇತ್ತೀಚಿನ ಅಂಕಿ-ಅಂಶಗಳ ಪ್ರಕಾರ ಪತ್ರಕರ್ತರ ವಿರುದ್ಧ ಮಾನನಷ್ಟ ಮೊಕದ್ದಮೆಗಳು ಹೆಚ್ಚಾಗಿ ದಾಖಲಾಗುತ್ತಿವೆ. ವರದಿಗಾರರು ಸುದ್ದಿ ಪ್ರಕಟಿಸುವಾಗ ಸೂಕ್ತ ದಾಖಲೆಗಳನ್ನು ಹೊಂದುವುದು ಅತಿ ಮುಖ್ಯವಾಗುತ್ತದೆಂದರು.

ಯಾರೋ ಒಬ್ಬ ಅಧಿಕಾರಿ, ರಾಜಕಾರಣಿ ಕುರಿತು ಭ್ರಷ್ಟಾಚಾರ ಅಥವಾ ಇನ್ಯಾವುದೋ ವಿಷಯಕ್ಕೆ ಸಂಬಂಧಿಸಿದ ಸುದ್ದಿ ಮಾಡುವುದು ಗೊತ್ತಾದರೆ ತಕ್ಷಣವೇ ಅವರು ನ್ಯಾಯಾಲಯದಿಂದ ತಡೆಯಾಜ್ಞೆ ತರುತ್ತಾರೆ. ಅದು ಸಿವಿಲ್ ಪ್ರಕರಣದ ರೀತಿಯಾಗಿರುತ್ತದೆ ಎಂದರು.

ಭಾರತದಲ್ಲಿ ಪತ್ರಿಕಾ ರಂಗಕ್ಕೆ ತನ್ನದೇಯಾದ ಮಹತ್ವವಿದೆ. ಇತ್ತೀಚೆಗೆ ಸಾಮಾಜಿಕ ಜಾಲ ತಾಣಗಳ ಹಾವಳಿ ಹೆಚ್ಚಾದ್ದರಿಂದ ಪ್ರತಿಯೊಬ್ಬರು ಪತ್ರಕರ್ತರಾಗಬಹುದಾಗಿದೆ. ಸಂಪಾದಕ, ಉಪ ಸಂಪಾದಕ ಇಲ್ಲದ ಪತ್ರಿಕೋದ್ಯಮ ಈಗ ಚಾಲ್ತಿಯಲ್ಲಿದ್ದು, ಸುದ್ದಿ ಬರೆಯುವಾಗ ಯಾವ ಪದ ಬಳಸಬೇಕು, ಬಳಸಬಾರದೆಂಬ ವಿವೇಕವೂ ಇಲ್ಲದಂತಾಗಿದೆ. ಆದ್ದರಿಂದ ಅತ್ಯಂತ ಜಾಗರೂಕರಾಗಿ ಕೆಲಸ ಮಾಡಬೇಕಾಗುತ್ತದೆಂದರು.

ಮಾನನಷ್ಟ ಮೊಕದ್ದಮೆ ವಿಚಾರದಲ್ಲಿ ನ್ಯಾಯಾಂಗದಲ್ಲೇ ಕೆಲವು ವೈರುಧ್ಯಗಳಿವೆ. ಸಮರ್ಥವಾಗಿ ವಾದ ಮಂಡಿಸಿದರೆ ಪ್ರಕರಣದಲ್ಲಿ ಜಯಗಳಿಸಬಹುದು. ಮಾನನಷ್ಟ ಮೊಕದ್ದಮೆ ಹೂಡಾದಕ್ಷಣ ದಂಡನೆ ಆಗಲಿದೆ ಎಂದಲ್ಲ. ನೀವು ನ್ಯಾಯಬದ್ಧವಾಗಿದ್ದರೆ ಸಾಕ್ಷಿ ಕರೆದರೆ ನಿರಾಕರಿಸಬಹುದು, ರೈಟ್ ಟು ಸೈಲೆನ್ಸ್ ಎಂದು ಸುಮ್ಮನಿರಬಹುದು. ಆಕ್ಟ್ 499/500 ಅಡಿ ನಾವು ಪೂರಕ ದಾಖಲೆ ಅಲ್ಲಿಸಲು ಅವಕಾಶ ಇದೆ. ನೀವು ಮಾನ ಹಾನಿ ಮಾಡದೇ ಇದ್ದರೆ ಅದಕ್ಕೆ ಪೂರಕವಾದ ದಾಖಲೆ ನಿಮ್ಮ ಬಳಿ ಇದ್ದರೆ, ಅದನ್ನು ನ್ಯಾಯಾಲಯದ ಮುಂದೆ ಸಾಬೀತುಪಡಿಸಿದರೆ ಪಾರಾಗಬಹುದೆಂದರು.

» ನಾಲ್ಕನೇ ಪುಟದಲ್ಲಿ

ಬೆಟ್ಟದ ಭೈರವೇಶ್ವರ ದೇಗುಲ ನಿರ್ವಹಣೆಗೆ ಸಮಿತಿ

ಫೋಟೋಶೂಟ್‌ಗೆ ಅವಕಾಶ ನೀಡುವುದು ಸಮಿತಿ ನಿರ್ಧಾರ: ಪಾರ್ಕಿಂಗ್‌ಗೆ ಶುಲ್ಕ

• ಪ್ರಜೋದಯ ವರದಿ

ಹಾಸನ: ಬೆಟ್ಟದ ಭೈರವೇಶ್ವರ ದೇವಾಲಯದ ಸಮಗ್ರ ನಿರ್ವಹಣೆ ಹಾಗು ಅಭಿವೃದ್ಧಿಗಾಗಿ ಗ್ರಾಮಸ್ಥರನ್ನೊಳಗೊಂಡ ತಹಶೀಲ್ದಾರ್ ನೇತೃತ್ವದಲ್ಲಿ ವಿಶೇಷ ಸಮಿತಿ ರಚಿಸಲಾಗಿದೆ ಎಂದು ಜಿಲ್ಲಾಧಿಕಾರಿ ಕೆ. ಎಸ್.ಲತಾಕುಮಾರಿ ಅವರು ತಿಳಿಸಿದ್ದಾರೆ.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಕಲೇಶಪುರ ತಾಲ್ಲೂಕಿನ ಸುಂದರ ಪ್ರವಾಸಿ ತಾಣಗಳಲ್ಲಿ ಒಂದಾದ ಬೆಟ್ಟದ ಭೈರವೇಶ್ವರ ದೇವಾಲಯ ಆವರಣದಲ್ಲಿ ಅಹಿತಕರ ಘಟನೆ ನಡೆಯಬಾರದಿತ್ತು. ಆ ಬಳಿಕ ನಾನು ಸ್ಥಳಕ್ಕೆ ಭೇಟಿ ನೀಡಿ, ಗ್ರಾಮಸ್ಥರೊಂದಿಗೆ ಸಭೆ ನಡೆಸಿ, ಶಿಸ್ತುಬದ್ಧ ವ್ಯವಸ್ಥೆ ರೂಪಿಸುವ ಉದ್ದೇಶದಿಂದ ಸಮಿತಿ ರಚನೆಗೆ ಕ್ರಮ ಕೈಗೊಳ್ಳಲಾಗಿದೆ ಎಂದು

ಹೇಳಿದರು.

ದೇವಾಲಯಕ್ಕೆ ದಿನೇದಿನೇ ಹೆಚ್ಚುತ್ತಿರುವ ಭಕ್ತರ ಹಾಗು ಪ್ರವಾಸಿಗರ ಸಂಖ್ಯೆಯನ್ನು ಗಮನ ದಲ್ಲಿಟ್ಟುಕೊಂಡು ದೇವಾಲಯದ ಪರಿಸರ ಸಂರಕ್ಷಣೆ, ಭಕ್ತರ ಸುರಕ್ಷತೆ, ಮೂಲಭೂತ ಸೌಲಭ್ಯಗಳ ಅಭಿವೃದ್ಧಿ ಸೇರಿ ವಿವಿಧ ಅಂಶಗಳ ಮೇಲ್ವಿಚಾರಣೆಯನ್ನು ಸಮಿತಿ ವಹಿಸಿಕೊಳ್ಳಲಿದೆ. ದೇವಾಲಯ ಆವರಣದಲ್ಲಿ ಫೋಟೋ ಶೂಟ್‌ಗೆ ಅವಕಾಶ ನೀಡಬೇಕೇ ಬೇಡವೇ ಎಂಬ ಮಹತ್ವದ ವಿಚಾರವನ್ನು ಕೂಡ ಸಮಿತಿ ಯೇ ಪರಿಶೀಲಿಸಿ ತೀರ್ಮಾನ ಕೈಗೊಳ್ಳಲಿದೆ ಎಂದರು.

ಪಾರ್ಕಿಂಗ್ ಸಮಸ್ಯೆ ಉಂಟಾಗುತ್ತಿರುವ ಬಗ್ಗೆ ಗಮನಕ್ಕೆ ಬಂದಿದೆ. ಈ ಸಂಬಂಧ ಸ್ಥಳೀಯ ಗ್ರಾಮ ಪಂಚಾಯಿತಿ ಆಡಳಿತ ಪಾರ್ಕಿಂಗ್ ಶುಲ್ಕ ನಿಗದಿ ಮಾಡಿ, ಸ್ಥಳದಲ್ಲಿ ಕಾವಲುಗಾರರನ್ನು ನಿಯೋಜನೆ ಮಾಡಲು ಸೂಚಿಸಲಾಗಿದೆ. ದೇವಸ್ಥಾನ ನಿರ್ವಹಣೆಗೆ ಅನುಕೂಲವಾಗುವ ನಿಟ್ಟಿನಲ್ಲಿ ಸಮಿತಿಯೇ ನಿರ್ಧಾರ ತೆಗೆದುಕೊಂಡು ಫೋಟೋ ಶೂಟ್‌ಗೆ ಅವಕಾಶ ಮಾಡಿಕೊಡುವ ಬಗ್ಗೆ ಚರ್ಚಿಸಿ ತೀರ್ಮಾನ ತೆಗೆದುಕೊಳ್ಳಲಿದೆ. ಭಕ್ತರ ಭಾವನೆಗಳಿಗೆ ಧಕ್ಕೆಯಾಗದಂತೆ ಮತ್ತು ಸ್ಥಳದ ಪಾವಿತ್ರ್ಯ ಕಾಪಾಡುವ ದೃಷ್ಟಿಯಿಂದ ಸೂಕ್ತ ನಿರ್ಧಾರ ಕೈಗೊಳ್ಳಲಾಗುವುದೆಂದು ಹೇಳಿದರು.

24 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಕಳವು

ಸಕಲೇಶಪುರ: ಮನೆಯಲ್ಲಿ ಯಾರೂ ಇಲ್ಲದಾಗ ಬಾಗಿಲು ಮುರಿದು ಒಳನುಗ್ಗಿರುವ ಕಳ್ಳರು 24 ಲಕ್ಷ ರೂ. ಮೌಲ್ಯದ ಚಿನ್ನ ಹಾಗು ಬೆಳ್ಳಿ ಆಭರಣ ಕಳವು ಮಾಡಿರುವ ಪ್ರಕರಣ ಪಟ್ಟಣದ ಮಲ್ಲಿಕಾರ್ಜುನ ನಗರದಲ್ಲಿ ನಡೆದಿದೆ.

ಮನೆ ಮಾಲೀಕ ಪ್ರಜ್ವಲ್ ಅವರು ಮನೆಗೆ ಬೀಗ ಹಾಕಿಕೊಂಡು ಮಾ.30ರಂದು ಕುಟುಂಬ ಸಮೇತ ಬೆಂಗಳೂರಿಗೆ ತೆರಳಿದ್ದರು. ಏ.3ರಂದು ವಾಪಾಸ್ ಬಂದು ನೋಡಿದಾಗ ಮನೆ ಬಾಗಿಲು ಮುರಿದಿರುವುದು ತಿಳಿದಿದೆ. ಸಿಸಿಟಿವಿ ಕ್ಯಾಮರಾ ಪರಿಶೀಲಿಸಿದಾಗ ಮಾ.2ರ ರಾತ್ರಿ ಕಳ್ಳರು ಮನೆಯ ಬೀಗ ಮುರಿದು ಬೀರುವಿನಲ್ಲಿಟ್ಟಿದ್ದ22 ಗ್ರಾಂ ತೂಕದ ಒಂದು ಕುತ್ತಿಗೆಯ ಚೈನ್, 12 ಗ್ರಾಂ ತೂಕದ ಒಂದು ಚಿನ್ನದ ಚೈನು, 20 ಗ್ರಾಂ ತೂಕದ ಮುತ್ತಿನ ಚಿನ್ನದ ಕುತ್ತಿಗೆ ಚೈನ್ ಮತ್ತು ಪೆಂಡೆಂಟ್, 15 ಗ್ರಾಂ ತೂಕದ ಎರಡು ಎಳೆ ಚಿನ್ನದ ಚೈನು ಮತ್ತು ಪೆಂಡೆಂಟ್, 12 ಗ್ರಾಂ ತೂಕದ ಒಂದು ಜೊತೆ ನವರತ್ನ ಕಿವಿನ ಓಲೆ, 40 ಗ್ರಾಂ ತೂಕದ ವಜ್ರದ ರೂಬಿ ಎಮರಾಲ್ಡ್ ಪೆಂಡೆಂಟ್ ಕಿವಿಯ ಓಲೆ, 50 ಗ್ರಾಂ ತೂಕದ 4 ಚಿನ್ನದ ಬಳೆ, 15 ಗ್ರಾಂ ತೂಕದ ಒಂದು ಕಡಗ, 20 ಗ್ರಾಂ ತೂಕದ ಒಂದು ಕಡಗವನ್ನು ಒಳಗೊಂಡ ಒಟ್ಟು 206 ಗ್ರಾಂ ತೂಕದ ಸುಮಾರು 20 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಹಾಗು 4 ಲಕ್ಷ ರೂ. ಬೆಲೆಯ 3 ಕೆ.ಜಿ. ಬೆಳ್ಳಿ ಆಭರಣ ಕದ್ದಿರುವುದು ತಿಳಿದುಬಂದಿದೆ. ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

3,969 ಗಣತಿದಾರರು, 734 ಮೇಲ್ವಿಚಾರಕರ ನೇಮಕ | ಜಿಲ್ಲಾಧಿಕಾರಿ ಮಾಹಿತಿ

ಜನಗಣತಿಗೆ ಜಿಲ್ಲಾದ್ಯಂತ 4,271 ಗಣತಿ ಬ್ಲಾಕ್ ರಚನೆ

• ಪ್ರಜೋದಯ ವರದಿ



ಹಾಸನ: ಜನಗಣತಿ ಕಾರ್ಯವನ್ನು ಯಶಸ್ವಿಯಾಗಿ ನಡೆಸಲು ಜಿಲ್ಲಾಡಳಿತ ಅಗತ್ಯ ಸಿದ್ಧತೆ ಕೈಗೊಂಡಿದೆ. ಜಿಲ್ಲಾದ್ಯಂತ 4,271 ಗಣತಿ ಬ್ಲಾಕ್ ರಚಿಸಿ, 3,969 ಗಣತಿದಾರರು ಮತ್ತು 734 ಮೇಲ್ವಿಚಾರಕರನ್ನು ನೇಮಕ ಮಾಡಿ ಅಧಿಸೂಚನೆ ಹೊರಡಿಸಲಾಗಿದೆ ಎಂದು ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರು ತಿಳಿಸಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಿಲ್ಲಾ, ತಾಲ್ಲೂಕು ಮತ್ತು ಸ್ಥಳೀಯ ಮಟ್ಟದಲ್ಲಿ ಚಾರ್ಜ್ ಆಫೀಸರ್, ವಿಷಯ ನಿರ್ವಾಹಕರು ಹಾಗು ತಾಂತ್ರಿಕ ಸಹಾಯಕರನ್ನು ನೇಮಿಸಿ, ಗ್ರಾಮ ಹಾಗು ನಗರ ಪ್ರದೇಶಗಳ ಗಡಿಗಳನ್ನು ಗುರುತಿಸಿ ಗಣತಿ ಬ್ಲಾಕ್‌ಗಳನ್ನು ರಚಿಸಲಾಗಿದೆ. ನೇಮಕಗೊಂಡಿರುವ ಅಧಿಕಾರಿಗಳಿಗೆ ಮಾ.9 ರಿಂದ 11ರ ವರೆಗೆ ತರಬೇತಿ ಕೂಡ ನೀಡಲಾಗಿದೆ ಎಂದು ಹೇಳಿದರು.

2027ರ ಜನಗಣತಿಯು ಸಂವಿಧಾನಾತ್ಮಕ ಮತ್ತು ಶಾಸನಬದ್ಧ ಚಟುವಟಿಕೆಯಾಗಿದೆ. ಈ ಬಾರಿ ಎರಡು ಹಂತದಲ್ಲಿ ಗಣತಿಯನ್ನು ನಡೆಸಲಾಗುತ್ತಿದೆ. ಹಂತ-1 ರಲ್ಲಿ ಮನೆಪಟ್ಟಿ ಮತ್ತು ಮನೆ ಗಣತಿ ಹಾಗು ಹಂತ-2ರಲ್ಲಿ ಜನಸಂಖ್ಯಾ ಗಣತಿ ನಡೆಯಲಿದೆ.

ಈಗಾಗಲೇ ಪ್ರಾರಂಭವಾಗಿರುವ ಸ್ವಯಂಗಣತಿ ವ್ಯವಸ್ಥೆಯಲ್ಲಿ ಜನರು ತಮ್ಮ ಮನೆಯ ಮಾಹಿತಿಯನ್ನು ಸ್ವತಃ ಆನ್‌ಲೈನ್ ಮೂಲಕ ನಮೂದಿಸಬಹುದು. ಸಾರ್ವಜನಿಕರು ತಮ್ಮ ಮೊಬೈಲ್ ಸಂಖ್ಯೆ ಮತ್ತು ಓಟಿಪಿ ಬಳಸಿ ಲಾಗಿನ್ ಆಗಿ, ಮನೆಯ ಸ್ಥಳವನ್ನು ಡಿಜಿಟಲ್ ಮ್ಯಾಪ್‌ನಲ್ಲಿ ಗುರುತಿಸಿ, ಕುಟುಂಬದ ಸಂಪೂರ್ಣ ಮಾಹಿತಿ ಭರ್ತಿ ಮಾಡಬಹುದು. ಮಾಹಿತಿ ಸಲ್ಲಿಸಿದ ನಂತರ ಅವರಿಗೆ ಎಸ್‌ಇ ಐಡಿ ನೀಡಲಾಗುತ್ತದೆ. ಅದನ್ನು ಗಣತಿದಾರರಿಗೆ ನೀಡುವ ಮೂಲಕ ಮಾಹಿತಿ ದೃಢೀಕರಣ ಮಾಡಬಹುದು ಎಂದರು.

ಮೊಬೈಲ್ ಅಪ್ಲಿಕೇಶನ್ ಡಿಜಿಟಲ್ ವ್ಯವಸ್ಥೆಯಿಂದ ಮಾಹಿತಿ ಸಂಗ್ರಹಣೆ ವೇಗವಾಗಿ ನಡೆಯುವುದರ ಜೊತೆಗೆ ತಪ್ಪುಗಳ ಸಾಧ್ಯತೆ ಕಡಿಮೆಯಾಗುತ್ತದೆ. ಡೇಟಾ ಸುರಕ್ಷತೆ ಮತ್ತು ಗೌಪ್ಯತೆಗೂ ಹೆಚ್ಚಿನ ಮಹತ್ವ ನೀಡಲಾಗಿದೆ. ಜನಗಣತಿ ಕಾರ್ಯದಲ್ಲಿ ತೊಡಗಿರುವ ಅಧಿಕಾರಿಗಳಿಗೆ ಮೈಸೂರಿನ ಆಡಳಿತ ತರಬೇತಿ ಸಂಸ್ಥೆಯಲ್ಲಿ ಮಾಸ್ಟರ್ ಟ್ರೈನರ್‌ಗಳಿಗೆ ತರಬೇತಿ ನೀಡಲಾಗಿದ್ದು, ಜಿಲ್ಲಾ ಮಟ್ಟದಲ್ಲಿ ಫೀಲ್ಡ್ ಟ್ರೈನರ್‌ಗಳಿಗೆ ತರಬೇತಿ ಹಮ್ಮಿಕೊಳ್ಳಲಾಗಿದೆ. ಅದರ ಜೊತೆಗೆ ಗಣತಿದಾರರು ಮತ್ತು ಮೇಲ್ವಿಚಾರಕರಿಗೆ ವಿಶೇಷ ತರಬೇತಿ ನೀಡುವ ಯೋಜನೆ ರೂಪಿಸಲಾಗಿದೆಂದು ಮಾಹಿತಿ ನೀಡಿದರು.

ಸಮಯ ಉಳಿತಾಯ, ನಿಖರ ಮಾಹಿತಿ ನೀಡುವ ಅವಕಾಶ, ವೇಗವಾದ ಡೇಟಾ ಸಂಸ್ಕರಣೆ, ಡಿಜಿಟಲ್ ಮತ್ತು ಸುರಕ್ಷಿತ ಪ್ರಕ್ರಿಯೆ, ಸರಳ ಮತ್ತು ಬಳಕೆದಾರ ಸ್ನೇಹಿ ವಿಧಾನ. ಸ್ವಯಂ-ಗಣತಿ ಮಾಡಲು ಸಾಧ್ಯವಾಗದಿದ್ದರೂ ಜನರು ಚಿಂತಿಸಬೇಕಾಗಿಲ್ಲ. ನಿಗದಿತ ಅವಧಿಯಲ್ಲಿ ಗಣತಿದಾರರು ಮನೆಗೆ ಭೇಟಿ ನೀಡಿ, ಎಲ್ಲಾ ಮಾಹಿತಿ ಸಂಗ್ರಹಿಸುತ್ತಾರೆ. ಜನಗಣತಿಯಲ್ಲಿ ನೀಡುವ ಮಾಹಿತಿಯನ್ನು ಸಂಪೂರ್ಣ ಗೌಪ್ಯವಾಗಿರಿಸಲಾಗುತ್ತದೆ. ಈ ಮಾಹಿತಿ ಕೇವಲ ಸರ್ಕಾರದ » ನಾಲ್ಕನೇ ಪುಟದಲ್ಲಿ

ಉತ್ಸಾಹದಿಂದ ಪಾಲ್ಗೊಳ್ಳಲು ಕರೆ

ಗಣತಿ ದೇಶದ ಅಭಿವೃದ್ಧಿಯ ಹಾದಿಯನ್ನು ನಿರ್ಧರಿಸುವ ಮಹತ್ವದ ಕಾರ್ಯವಾಗಿದೆ. ಪ್ರತಿಯೊಬ್ಬ ನಾಗರಿಕರೂ ಭಾಗವಹಿಸುವುದು ಅವರ ಜವಾಬ್ದಾರಿ. ಜನರು ಉತ್ಸಾಹದಿಂದ ಪಾಲ್ಗೊಂಡರೆ ಮಾತ್ರ ಜನಗಣತಿ ಯಶಸ್ವಿಯಾಗುತ್ತದೆ. ಆದ್ದರಿಂದ ಪ್ರತಿಯೊಬ್ಬರೂ ತಮ್ಮ ಮಾಹಿತಿಯನ್ನು ನಿಖರವಾಗಿ ನೀಡಿ, ದೇಶದ ಅಭಿವೃದ್ಧಿಗೆ ಕೈಜೋಡಿಸಬೇಕೆಂದು ಜಿಲ್ಲಾಧಿಕಾರಿ ಕರೆ ನೀಡಿದರು.

ಈ ಬಾರಿ ಡಿಜಿಟಲ್ ಗಣತಿಗೆ ಒತ್ತು

ಹಿಂದಿನ ಎಲ್ಲಾ ಗಣತಿಗಿಂತ ಈ ಬಾರಿ ಗಣತಿ ವಿಭಿನ್ನವಾಗಿದ್ದು, ಡಿಜಿಟಲ್ ತಂತ್ರಜ್ಞಾನ ಮತ್ತು ಆಧುನಿಕ ವ್ಯವಸ್ಥೆಗಳೊಂದಿಗೆ ನಡೆಯಲಿದೆ. ಏ.15 ರಿಂದ ಮೇ 15ರ ವರೆಗೆ ಮನೆಪಟ್ಟಿ ಮತ್ತು ಮನೆಗಣತಿ ನಡೆಯಲಿದೆ. ಅದಕ್ಕೂ ಮೊದಲು ಏ.1ರಿಂದ ಸ್ವಯಂ ಗಣತಿ ಪ್ರಾರಂಭವಾ ಗಿದ್ದು, ಜಿಲ್ಲೆಯ ಪ್ರತಿಯೊಬ್ಬರೂ ಸ್ವಯಂಗಣತಿಯಲ್ಲಿ ಭಾಗಿಯಾಗಬೇಕೆಂದು ಡಿಸಿ ಮನವಿ ಮಾಡಿದರು.

ಆಟೋ ಗ್ಯಾಸ್ ಅಭಾವ, ದರ ಏರಿಕೆ ಖಂಡಿಸಿ ಪ್ರತಿಭಟನೆ

• ಪ್ರಜೋದಯ ವರದಿ

ಹಾಸನ: ಆಟೋ ಗ್ಯಾಸ್ ಅಭಾವ, ದರ ಏರಿಕೆ ಖಂಡಿಸಿ ಆಟೋ ಚಾಲಕರು ಶನಿವಾರ ಪ್ರತಿಭಟನೆ ನಡೆಸಿದರು.

ನಗರದ ಹೇಮಾವತಿ ಪ್ರತಿಮೆ ಬಳಿ ಜಮಾಯಿಸಿದ ನೂರಾರು ಪ್ರತಿಭಟನಾಕಾರರು, ಕೇಂದ್ರ ಹಾಗು ರಾಜ್ಯ ಸರ್ಕಾರಗಳ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಆಟೋ ಚಾಲಕ ಕಿರಣ್ ಮಾತನಾಡಿ, ಇಸ್ರೇಲ್ ಯುದ್ಧದ ನಡುವೆ ಆಟೋ ಗ್ಯಾಸ್ ಸಮಸ್ಯೆ ಉಂಟಾಗಿ ಆಟೋ ಚಾಲಕರ ಪಾಡು ಹೇಳತೀರದಾಗಿದೆ. ಆಟೋಗಳನ್ನೇ ನಂಬಿಕೊಂಡು ಬದುಕುತ್ತಿರುವ ನಮ್ಮ ಜೀವನ ಮೂರಾಬಟ್ಟೆಯಾಗಿದೆ. ಕೇಂದ್ರ ಹಾಗು ರಾಜ್ಯ ಸರ್ಕಾರಗಳು ಈ ಬಗ್ಗೆ ತುರ್ತು ಗಮನಹರಿಸುವ ಅಗತ್ಯವಿದೆ ಎಂದು ಹೇಳಿದರು.

ಮಕ್ಕಳ ವಿದ್ಯಾಭ್ಯಾಸದಿಂದ ಹಿಡಿದು ಪ್ರತಿಯೊಂದು ಆಟೋಗಳನ್ನು ಅವಲಂಬಿಸಿರುವ ಆಟೋ ಚಾಲಕರ ಕುಟುಂಬಗಳು ಬೀದಿ ಪಾಲಾಗುವ ಪರಿಸ್ಥಿತಿಗೆ ಬಂದಿವೆ. ಒಂದಡೆ ಆಟೋ ಗ್ಯಾಸ್ ಅಭಾವ ಹೆಚ್ಚಾಗಿದ್ದು, ಹಣ ಕೊಟ್ಟರೂ ಗ್ಯಾಸ್ ಸಿಗುತ್ತಿಲ್ಲ, ನಮ್ಮ ಜೀವನ ನಿರ್ವಹಣೆ ಕಷ್ಟವಾಗಿದೆ. ಇನ್ನೊಂದೆಡೆ ಆಟೋ ಗ್ಯಾಸ್ ಬೆಲೆ ದಿನೇ ದಿನೇ ಹೆಚ್ಚಳವಾಗುತ್ತಿದ್ದು, ಇದೂ ಕೂಡ ನಮಗೆ ಸಮಸ್ಯೆಯಾಗಿದೆ. ನಾವು ಕೇಳಿದಷ್ಟು ಆಟೋ ಗ್ಯಾಸ್ ಇಲ್ಲದಿರುವುದು ಮತ್ತಷ್ಟು ಸಮಸ್ಯೆಗೆ ಕಾರಣ. ಬೆಲೆ ಏರಿಕೆಯಿಂದ ದಿನಕ್ಕೆ ನೂರು ರೂಪಾಯಿ ದುಡಿಯುವುದು ಕೂಡ ಕಷ್ಟವಾಗಿದೆ. ಇದನ್ನು ಗಂಭೀರವಾಗಿ ಪರಿಗಣಿಸಿ ಸಂಬಂಧಿಸಿದವರು ನಮಗೆ ಪರಿಹಾರ ಕಲ್ಪಿಸಬೇಕೆಂದು ಮನವಿ ಮಾಡಿದರು.

ಬೇರೆ ಕಡೆಗೆ ಹೋಲಿಸಿದರೆ ಕರ್ನಾಟಕದಲ್ಲಿ ಮಾತ್ರ ಈ ರೀತಿ ಸಮಸ್ಯೆ ಎದುರಾಗಿದೆ. ಅದರಲ್ಲಿ ಸರ್ಕಾರಗಳ ನಿರ್ಲಕ್ಷ್ಯವೂ ಎದ್ದು ಕಾಣುತ್ತಿದೆ. ಕೂಡಲೇ ನಮ್ಮ ಸಮಸ್ಯೆಗೆ ಆಳುವ ಸರ್ಕಾರಗಳು ಸ್ಪಂದಿಸಬೇಕೆಂದು ಮನವಿ ಮಾಡಿದರು. ಪ್ರತಿಭಟನೆಯಲ್ಲಿ ಆಟೋ ಚಾಲಕರ ಸಂಘದ ರಾಹುಲ್, ಪ್ರದೀಪ್, ರಾಕೇಶ್, ದಿಲೀಪ್, ವಸಂತಕುಮಾರ್, ಕುಮಾರ್ ಇದ್ದರು.

ಬುಡಕಟ್ಟು ಕ್ರೀಡಾ ಪ್ರತಿಭೆ: ನಮ್ಮ ರಾಷ್ಟ್ರೀಯ ಹೆಮ್ಮೆ

ಒಣಗಿದ ಹಣ್ಣಿನ ಬೀಜಗಳನ್ನು ಪಗಡೆ ಮತ್ತು ಚಿಕ್ಕ ತುಂಡುಗಳಾಗಿ ಬಳಸುತ್ತಾರೆ. ಒಣ ಎಲೆಗಳು, ಮರದ ಬೇರುಗಳು ಮತ್ತು ಹಳೆಯ ಬಟ್ಟೆಯ ತುಂಡುಗಳಿಂದ ಚೆಂಡುಗಳನ್ನು ತಯಾರಿಸುತ್ತಾರೆ. ಬಿದಿರನ್ನು ಬಳಸಿ ಅವರು ಹಾಕಿ ಮತ್ತು ಫುಟ್ಬಾಲ್ ಗೋಲ್‌ಪೋಸ್ಟ್‌ಗಳನ್ನು ನಿರ್ಮಿಸುತ್ತಾರೆ. ಹೀಗೆ ವಿವಿಧ ನೈಸರ್ಗಿಕ ವಸ್ತುಗಳನ್ನು ಬಳಸಿ ತಮ್ಮದೇ ಆದ ಕ್ರೀಡಾ ಜಗತ್ತನ್ನು ಸೃಷ್ಟಿಸಿ ಕೊಳ್ಳುತ್ತಾರೆ.

ರಾಷ್ಟ್ರಪತಿ, ಭಾರತ

ಕ್ರೀಡೆಯು ಅವರಿಗೆ ಕೇವಲ ಮನರಂಜನೆ ಮತ್ತು ಸಾಮಾಜಿಕ ಸಂಪರ್ಕದ ಮಾಧ್ಯಮವಾಗಿ ಉಳಿಯದೆ, ಜೀವನದಲ್ಲಿ ಮುನ್ನಡೆಯಲು, ಆರ್ಥಿಕ ಸ್ವಾವಲಂಬನೆ ಸಾಧಿಸಲು ಮತ್ತು ಸಾಮಾಜಿಕ ಗೌರವ ಗಳಿಸಲು ಒಂದು ದಾರಿಯಾಗುತ್ತದೆ. 2018ರಿಂದ ರಾಜ್ಯ ಸರಕಾರಗಳು ಮತ್ತು ಕೆಲವು ಕ್ರೀಡಾ ಸಂಘಟನೆಗಳ ಸಹಯೋಗದಲ್ಲಿ ಕೇಂದ್ರ ಸರಕಾರ ಪ್ರಾರಂಭಿಸಿದ ಖೇಲೋ ಇಂಡಿಯಾ ಅಭಿಯಾನ ಸಕಾರಾತ್ಮಕ ಬದಲಾವಣೆಗಳನ್ನು ತಂದಿದೆ.

ಗ್ರಾಮೀಣ ಪ್ರದೇಶಗಳಲ್ಲಿ ಮತ್ತು ಅರಣ್ಯ ಪ್ರದೇಶಗಳಲ್ಲಿ ಮಕ್ಕಳು ಹೆಚ್ಚಿನ ಸಮಯವನ್ನು ಹೊರಾಂಗಣದಲ್ಲಿ, ಪ್ರಕೃತಿಯ ಮಡಿಲಿನಲ್ಲಿ ಕಳೆಯುತ್ತಾರೆ ಎಂಬುದನ್ನು ನಾನು ಗಮನಿಸಿದ್ದೇನೆ. ಆಟವಾಡಲು ಅವರು ಸರಳ ಮಾರ್ಗಗಳನ್ನು ಕಂಡುಕೊಳ್ಳುತ್ತಾರೆ. ನೆಲದ ಮೇಲೆ ಗೆರೆಗಳನ್ನು ಎಳೆದು, ಆಕಾರಗಳನ್ನು ರಚಿಸಿ ಆಟದ ಅಖಾಡಗಳನ್ನು ತಯಾರಿಸುತ್ತಾರೆ.

ಒಣಗಿದ ಹಣ್ಣಿನ ಬೀಜಗಳನ್ನು ಪಗಡೆ ಮತ್ತು ಚಿಕ್ಕ ತುಂಡುಗಳಾಗಿ ಬಳಸುತ್ತಾರೆ. ಒಣ ಎಲೆಗಳು, ಮರದ ಬೇರುಗಳು ಮತ್ತು ಹಳೆಯ ಬಟ್ಟೆಯ ತುಂಡುಗಳಿಂದ ಚೆಂಡುಗಳನ್ನು ತಯಾರಿಸುತ್ತಾರೆ. ಬಿದಿರನ್ನು ಬಳಸಿ ಅವರು ಹಾಕಿ ಮತ್ತು ಫುಟ್ಬಾಲ್ ಗೋಲ್‌ಪೋಸ್ಟ್‌ಗಳನ್ನು ನಿರ್ಮಿಸುತ್ತಾರೆ. ಹೀಗೆ ವಿವಿಧ ನೈಸರ್ಗಿಕ ವಸ್ತುಗಳನ್ನು ಬಳಸಿ ತಮ್ಮದೇ ಆದ ಕ್ರೀಡಾ ಜಗತ್ತನ್ನು ಸೃಷ್ಟಿಸಿಕೊಳ್ಳುತ್ತಾರೆ.

ಅನೇಕ ಮಕ್ಕಳು ಚಪ್ಪಲಿ ಅಥವಾ ಜೆರ್ಸಿ (ಒಳಗವಚ) ಇಲ್ಲದೆಯೇ ಉತ್ಸಾಹದಿಂದ ಆಟವಾಡುತ್ತಾರೆ. ಕೆರೆ ಮತ್ತು ಸರೋವರಗಳಲ್ಲಿ ಮಕ್ಕಳು ಸಾಕಷ್ಟು ಈಜಾಡುತ್ತಾರೆ. ಇಂದು ಲಭ್ಯವಿರುವ ತರಬೇತಿ ಮತ್ತು ಸಂಪನ್ಮೂಲಗಳ ಸಹಾಯದಿಂದ ಒಡಿಶಾದ ಜಾಜ್ಪುರ ಜಿಲ್ಲೆಯ ನಿವಾಸಿಯಾದ 15 ವರ್ಷದ ಬಾಲಕಿ ಅಂಜಲಿ ಮುಂಡಾ, ಉದ್ಘಾಟನಾ ಖೇಲೋ ಇಂಡಿಯಾ ಟ್ರೈಬಲ್ ಗೇಮ್ಸ್-2026ರ ಮೊದಲ ದಿನವೇ ಮೂರು ಚಿನ್ನದ ಪದಕಗಳನ್ನು ಗೆದ್ದು ಇಡೀ ದೇಶದ ಯುವಜನತೆಗೆ ಸ್ಫೂರ್ತಿ ನೀಡಿದ್ದಾಳೆ.

ಬುಡಕಟ್ಟು ಜನರಿಗೆ ಬಿಲ್ಲು-ಬಾಣಗಳ ಕ್ರೀಡೆಯ ಮೇಲೆ ಸಹಜ ಒಲವಿದೆ. 1855ರಲ್ಲಿ ಸಂತಾಲ್ ಸಮುದಾಯವು ಶೋಷಣೆಯ ವಿರುದ್ಧ ತೀವ್ರ ಹೋರಾಟ ನಡೆಸಿತ್ತು, ಅದು ಸಂತಾಲ್ ಹೂಲ್ ಎಂದೇ ಖ್ಯಾತಿಯಾಗಿತ್ತು. ಆಧುನಿಕ ಶಸ್ತ್ರಾಸ್ತ್ರ ಹೊಂದಿದ್ದ ಬ್ರಿಟಿಷ್ ಪಡೆಗಳು ಆ ದಂಗೆಯನ್ನು ಅಡಗಿಸಿದರೂ, ತಮ್ಮ ವಿವರಣೆಗಳಲ್ಲಿ ಸಂತಾಲ್ ವೀರರ ಯುದ್ಧ ಕೌಶಲ್ಯ, ವಿಶೇಷವಾಗಿ ಬಿಲ್ಲು-ಬಾಣ ವಿದ್ಯೆಯ ಬಗ್ಗೆ ಬ್ರಿಟಿಷರು ವಿಶೇಷ

ಉಲ್ಲೇಖ ಮಾಡಿದ್ದಾರೆ.

ಜಾರ್ಖಂಡ್‌ನ ಊರಿ-ಮಾರಿ ಗ್ರಾಮದಲ್ಲಿ ಇರುವ ಸಂತಾಲ್ ಹೂಲ್‌ನ ವೀರ ನಾಯಕರಾದ ಹಾಗೂ ಅಮರ ಸಹೋದರರು ಸಿಧೋ-ಕಾನ್ಹು ಮತ್ತು ಚಾಂದ್-ಭೈರವ್ ಹಾಗೂ ವೀರ ಸಹೋದರಿಯರಾದ ಫೂಲೋ-ಝೂನೋ ಅವರ ಪ್ರತಿಮೆಗಳನ್ನು ರಾಜ್ಯಪಾಲರಾಗಿದ್ದ ನನ್ನ ಅಧಿಕಾರಾವಧಿಯಲ್ಲಿ ಅನಾವರಣಗೊಳಿಸುವ ಸೌಭಾಗ್ಯ ನನಗೆ ದೊರೆತಿತ್ತು.

ಭಾರತದ ಪ್ರತಿಯೊಂದು ಮಗುವಿಗೂ ಶ್ರೇಷ್ಠ ಬಿಲ್ಲುಗಾರ ಎಂದು ಆರಾಧಿಸಲ್ಪಡುವ ಏಕಲವ್ಯನ ಮಹಾನತೆಯ ಬಗ್ಗೆ ಗೊತ್ತಿದೆ. ಏಕಲವ್ಯ ಪ್ರತಿಯೊಬ್ಬ ಭಾರತೀಯನಿಗೆ, ವಿಶೇಷವಾಗಿ ಬುಡಕಟ್ಟು ಸಮುದಾಯಗಳಿಗೆ ಸ್ಫೂರ್ತಿಯ ಸಂಕೇತವಾಗಿದ್ದಾರೆ. ಏಕಲವ್ಯ ಮಾದರಿ ವಸತಿ ಶಾಲೆಗಳಲ್ಲಿ ಸ್ಥಾಪಿಸಲಾದ ಮಕ್ಕಳಿಗೆ ಆಧುನಿಕ ಕ್ರೀಡಾ ಸೌಲಭ್ಯ ಮತ್ತು ವಿಧಾನಗಳನ್ನು ಒದಗಿಸುತ್ತಿವೆ.

ಅದೇ ರೀತಿ ಶಾಲಾ ವ್ಯವಸ್ಥೆಯ ಜತೆ ಬೇರೆಡೆ ಇರುವ ಕ್ರೀಡಾ ಪ್ರತಿಭೆಗಳನ್ನು ಗುರುತಿಸಿ ತರಬೇತಿ ನೀಡುವ ಯೋಜನೆಗಳನ್ನೂ ಸಹ ಜಾರಿಗೆ ತರಲಾಗುತ್ತಿದೆ. ನನ್ನ ವೈಯಕ್ತಿಕ ಪ್ರಯತ್ನಗಳ ಮೂಲಕ ನನ್ನ ಹಳ್ಳಿಯಲ್ಲಿ ಹಿಂದುಳಿದ ವರ್ಗಗಳ ಮಕ್ಕಳಿಗಾಗಿ ವಸತಿ ಶಾಲೆಯೊಂದನ್ನು ಸ್ಥಾಪಿಸಲಾಗಿದೆ. ಈ ಕಿರು ಉಪಕ್ರಮದ ಭಾಗವಾಗಿ ಶಾಲಾ ಆವರಣದಲ್ಲಿ ಬಿಲ್ಲು-ಬಾಣ ತರಬೇತಿಯ ವ್ಯವಸ್ಥೆಯನ್ನೂ ಮಾಡಲಾಗಿದೆ.

ಸರಕಾರದ ಉಪಕ್ರಮಗಳ ಜತೆಗೆ, ಸಣ್ಣ ವೈಯಕ್ತಿಕ ಮತ್ತು ಸಾಮೂಹಿಕ ಪ್ರಯತ್ನಗಳು, ಬುಡಕಟ್ಟು ಮಕ್ಕಳಲ್ಲಿ ಅಡಗಿರುವ ಕ್ರೀಡಾ ಪ್ರತಿಭೆಯನ್ನು ಬೆಳೆಸಲು ನೆರವಾಗುತ್ತವೆ. ನನ್ನ ಗ್ರಾಮದಲ್ಲಿನ ಇತರ ಬುಡಕಟ್ಟು ಮಕ್ಕಳಂತೆ, ಈಜು ಸೇರಿದಂತೆ ವ್ಯಾಯಾಮ ಮತ್ತು ಕ್ರೀಡೆಗಳ ಬಗ್ಗೆ ನನಗೂ ಬಹಳ ಆಸಕ್ತಿ ಇತ್ತು.

ಶಾಲಾ ಕ್ರೀಡಾ ಸ್ಪರ್ಧೆಗಳಲ್ಲಿ ನಾನು ಸಾಮಾನ್ಯವಾಗಿ ಪ್ರಥಮ ಸ್ಥಾನ ಪಡೆಯುತ್ತಿದ್ದೆ. ಒಮ್ಮೆ ಒಂದು ಸ್ಪರ್ಧೆಯಲ್ಲಿ ನನ್ನ ಗೆಳತಿ ಮೊದಲ ಬಹುಮಾನ ಗೆದ್ದು, ಆಕೆಗೆ ಸಂತೋಷ ಸಿಗಲಿ ಎಂದು ನಾನು ಉದ್ದೇಶಪೂರ್ವಕವಾಗಿ ಹಿಂದೆ ಸರಿದೆ. ಕ್ರೀಡೆಯು ತಂಡದ ಮನೋಭಾವವನ್ನು ಬೆಳೆಸುತ್ತದೆ ಮತ್ತು ಸಾಮಾಜಿಕ ಬಾಂಧವ್ಯವನ್ನು ಬಲಪಡಿಸುತ್ತದೆ.

ಸಾಮಾನ್ಯವಾಗಿ ಆಟದ ಮೈದಾನದಲ್ಲಿ ತೀವ್ರ ಪ್ರತಿಸ್ಪರ್ಧೆ ತೋರಿಸುವ ಆಟಗಾರರು ಮೈದಾನದ ಹೊರಗೆ ಉತ್ತಮ ಸ್ನೇಹಿತರಾಗಿರುತ್ತಾರೆ ಎಂಬುದನ್ನು ಗಮನಿಸಬಹುದು. ನನ್ನ ಅಣ್ಣ ಉತ್ತಮ ಫುಟ್ಬಾಲ್ ಆಟಗಾರನಾಗಿದ್ದ, ಆದರೆ ತೀವ್ರ ಗಾಯದಿಂದಾಗಿ ಕ್ರೀಡೆಯನ್ನು ಮುಂದುವರಿಸಲು ಅವರಿಂದ ಸಾಧ್ಯವಾಗಲಿಲ್ಲ.

ನನ್ನ ಕುಟುಂಬದ ಇತರ ಹಲವು ಸದಸ್ಯರು ವಿವಿಧ ಕ್ರೀಡೆಗಳಲ್ಲಿ ಶ್ರೇಷ್ಠತೆ ಮೆರೆದಿದ್ದಾರೆ. ಬುಡಕಟ್ಟು ಕುಟುಂಬಗಳಲ್ಲಿ ಕ್ರೀಡೆಯ ಒಂದು ಸಜೀವ ಸಂಪ್ರದಾಯ ಇದೆ ಎಂಬುದನ್ನು ತಿಳಿಸಲು ನಾನು ಈ ವೈಯಕ್ತಿಕ ಅನುಭವವನ್ನು ಹಂಚಿಕೊಳ್ಳುತ್ತಿದ್ದೇನೆ. ಅವರಲ್ಲಿ ಅಪಾರ ಪ್ರತಿಭೆ, ಶಕ್ತಿ, ಆಸಕ್ತಿ ಮತ್ತು ಶ್ರೇಷ್ಠತೆ ಸಾಧಿಸುವ ಛಲವಿದೆ.

ಇಂಥ ಪ್ರತಿಭೆಯನ್ನು ಸೌಲಭ್ಯ ಮತ್ತು ತರಬೇತಿಯ ಮೂಲಕ ಪೋಷಿಸಿದರೆ, ಕ್ರೀಡೆಯು ಅವರಿಗೆ ಕೇವಲ ಮನರಂಜನೆ ಮತ್ತು ಸಾಮಾಜಿಕ ಸಂಪರ್ಕದ ಮಾಧ್ಯಮವಾಗಿ ಉಳಿಯದೆ, ಜೀವನದಲ್ಲಿ ಮುನ್ನಡೆಯಲು, ಆರ್ಥಿಕ ಸ್ವಾವಲಂಬನೆ ಸಾಧಿಸಲು ಮತ್ತು ಸಾಮಾಜಿಕ ಗೌರವ ಗಳಿಸಲು ಒಂದು ದಾರಿಯಾಗುತ್ತದೆ.

2018ರಿಂದ ರಾಜ್ಯ ಸರಕಾರಗಳು ಮತ್ತು ಕೆಲ ಕ್ರೀಡಾ ಸಂಘಟನೆಗಳ ಸಹಯೋಗದಲ್ಲಿ ಕೇಂದ್ರ ಸರಕಾರ ಪ್ರಾರಂಭಿಸಿದ ಖೇಲೋ ಇಂಡಿಯಾ ಅಭಿಯಾನ ಸಕಾರಾತ್ಮಕ ಬದಲಾವಣೆಗಳನ್ನು ತಂದಿದೆ.

ಕೆಲ ವರ್ಷಗಳ ಹಿಂದಿನವರೆಗೂ ನಮ್ಮ ದೇಶದಲ್ಲಿ ಉತ್ತಮ ಕ್ರೀಡಾ ಸೌಲಭ್ಯಗಳು ಕೇವಲ ದೊಡ್ಡ ನಗರಗಳಲ್ಲಿ ಮಾತ್ರ ಲಭ್ಯವಿದ್ದವು, ಆದರೆ ಗ್ರಾಮೀಣ ಮತ್ತು ಅರಣ್ಯ ಪ್ರದೇಶಗಳು ಪ್ರತಿಭಾವಂತ ಆಟಗಾರರಿಂದ ತುಂಬಿವೆ. ಬುಡಕಟ್ಟು ಪ್ರದೇಶಗಳಲ್ಲಿ ಕ್ರೀಡಾ ಅಕಾಡೆಮಿಗಳು ಮತ್ತು ತರಬೇತಿ ಕೇಂದ್ರಗಳು ಇರಲಿಲ್ಲ. ಈಗ ಏಕಲವ್ಯ ಮಾದರಿ ವಸತಿ ಶಾಲೆಗಳಲ್ಲಿ ಮಕ್ಕಳ ಕ್ರೀಡೆಗೆ ವಿಶೇಷ ಗಮನ ನೀಡುವುದರಿಂದ ಹಿಡಿದು ಖೇಲೋ ಇಂಡಿಯಾ ಟ್ರೈಬಲ್ ಗೇಮ್ಸ್‌ನಂತಹ ಉಪಕ್ರಮಗಳವರೆಗೆ, ಬುಡಕಟ್ಟು ಕ್ರೀಡಾಪಟುಗಳಿಗೆ ತರಬೇತಿ ನೀಡಲು ಮತ್ತು ಅವರ ಕೌಶಲ್ಯಗಳಿಗೆ ಪ್ರೋತ್ಸಾಹ ನೀಡಲು ಹಲವಾರು ಚಟುವಟಿಕೆಗಳು ನಡೆಯುತ್ತಿವೆ.

ನನ್ನ ವಿದ್ಯಾರ್ಥಿ ದಿನಗಳಲ್ಲಿ ಐದು ಅಥವಾ ಆರು ಹಳ್ಳಿಗಳ ಜನರು ಒಟ್ಟಾಗಿ ಕ್ರೀಡಾ ಸ್ಪರ್ಧೆಗಳನ್ನು ಆಯೋಜಿಸುತ್ತಿದ್ದ ವಿಷಯ ನನಗೆ ಈಗಲೂ ನೆನಪಿದೆ. ಕೆಲ ಧಾರ್ಮಿಕ ಮತ್ತು ಸಾಂಸ್ಕೃತಿಕ ಸಂಘಟನೆಗಳು ಕೂಡ ಬುಡಕಟ್ಟು ಪ್ರದೇಶಗಳಲ್ಲಿ ಕ್ರೀಡೆಯನ್ನು ಉತ್ತೇಜಿಸಿವೆ. ಆದರೆ ಇಂತಹ ಗ್ರಾಮೀಣ ಸ್ಪರ್ಧೆಗಳಲ್ಲಿ ಭಾಗವಹಿಸುವ ಉತ್ತಮ ಆಟಗಾರರೂ ಸಹ, ಗ್ರಾಮೀಣ ಮಟ್ಟಕ್ಕಿಂತ ಮೇಲೇರಲು ಸಾಧ್ಯವಾಗುತ್ತಿರಲಿಲ್ಲ. ಈ ಪರಿಸ್ಥಿತಿಯನ್ನು ಬದಲಾಯಿಸಲು ಕಳೆದ ಕೆಲ ವರ್ಷಗಳಲ್ಲಿ ಅನೇಕ ಶ್ಲಾಘನೀಯ ಪ್ರಯತ್ನಗಳು ನಡೆದಿವೆ.

ಈ ಪ್ರಯತ್ನಗಳಿಗೆ ಮತ್ತಷ್ಟು ಚಾಲನೆ ನೀಡಲು ಖೇಲೋ ಇಂಡಿಯಾ ಟ್ರೈಬಲ್ ಗೇಮ್ಸ್ 2026 ಅನ್ನು ಆಯೋಜಿಸಲಾಯಿತು. ಈ ಕಾಯಕ್ರಮದ ಆಯೋಜನೆಯ ಪ್ರಕ್ರಿಯೆಯಲ್ಲಿ ತಳಮಟ್ಟದ ಬುಡಕಟ್ಟು ಆಟಗಾರರನ್ನು ಗುರುತಿಸಿ ಅವರಿಗೆ ಕ್ರೀಡಾ ಸೌಲಭ್ಯ ಮತ್ತು ತರಬೇತಿ ನೀಡಲಾಗಿದೆ. ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಆಟಗಾರರು ಈ ರಾಷ್ಟ್ರೀಯ ಬುಡಕಟ್ಟು ಕ್ರೀಡಾಕೂಟದಲ್ಲಿ ತಮ್ಮ ಪ್ರತಿಭೆಯನ್ನು ಪ್ರದರ್ಶಿಸಿದ್ದಾರೆ.

ಆಟಗಾರರ ಸಹಜ ಪ್ರತಿಭೆಯ ಆಧಾರದ ಮೇಲೆ ಭಾರತ 1928ರಲ್ಲಿ ಹಾಕಿಯಲ್ಲಿ ಮೊದಲ ಒಲಿಂಪಿಕ್ ಚಿನ್ನದ ಪದಕ ಸಾಧಿಸಿತು. ಆ ವಿಜಯದಲ್ಲಿ ಬುಡಕಟ್ಟು ಸಮುದಾಯದ ಆಟಗಾರರ ಪ್ರಮುಖ ಕೊಡುಗೆ ಇತ್ತು. ಅಂದಿನಿಂದ ಇಂದಿನವರೆಗೆ ದಿಲೀಪ್ ಟಿರ್ಕಿ, ಸುಬೋಧ್ ಲಕ್ರಾ ಮತ್ತು ಸಲೀಮ ತೇತೆಯಂತಹ ಹಾಕಿ ತಾರೆಗಳು ಭಾರತದ ಪುರುಷ ಮತ್ತು ಮಹಿಳಾ ತಂಡಗಳನ್ನು ತಮ್ಮ ಪ್ರತಿಭೆಯಿಂದ ಶ್ರೀಮಂತಗೊಳಿಸುವುದನ್ನು ಮುಂದುವರಿಸಿದ್ದಾರೆ.

ಭಾರತ ಸರಕಾರದ ರಾಷ್ಟ್ರೀಯ ಕ್ರೀಡಾ ಅಭಿವೃದ್ಧಿ ಕಾರ್ಯಕ್ರಮ ಖೇಲೋ ಇಂಡಿಯಾ ಅಡಿಯಲ್ಲಿ ಸ್ಥಳೀಯ ಮಟ್ಟದಿಂದ ರಾಷ್ಟ್ರೀಯ ಮಟ್ಟದವರೆಗೆ ಎಲ್ಲ ಭೌಗೋಳಿಕ ಪ್ರದೇಶಗಳು, ಸಾಮಾಜಿಕ ವರ್ಗಗಳು ಮತ್ತು ಸಂಸ್ಥೆಗಳಿಗೆ ಸೂಕ್ತ ಕ್ರೀಡಾ ಪರಿಸರ ವ್ಯವಸ್ಥೆ ಒದಗಿಸಲು ಸಮಗ್ರ ಪ್ರಯತ್ನಗಳು ನಡೆಯುತ್ತಿವೆ. ಈ ಕಾರ್ಯಕ್ರಮದಡಿ ಕ್ರೀಡೆಯಲ್ಲಿ ಹುಡುಗಿಯರ ಭಾಗವಹಿಸುವಿಕೆಯನ್ನು ಉತ್ತೇಜಿಸಲು ಜಾರಿಗೊಳಿಸಲಾಗುತ್ತಿರುವ ಅಸ್ಮಿತಾ ಯೋಜನೆ ನಮ್ಮ ಬುಡಕಟ್ಟು ಹೆಣ್ಣುಮಕ್ಕಳ ಸಾಮರ್ಥ್ಯವನ್ನೂ ವಿಕಸಿತಗೊಳಿಸುತ್ತಿದೆ.

ಖೇಲೋ ಇಂಡಿಯಾ ಟ್ರೈಬಲ್ ಗೇಮ್ಸ್ 2026 ನಿರ್ಮಿಸಿದ ಉತ್ಸಾಹ ಮತ್ತು ವೇಗವನ್ನು ನಿರಂತರ ಬಲಪಡಿಸುತ್ತ, ಬುಡಕಟ್ಟು ಕ್ರೀಡಾಪಟುಗಳನ್ನು ತಡೆಯಿಲ್ಲದೆ ಪ್ರೋತ್ಸಾಹಿಸಿದರೆ, ಭಾರತವನ್ನು ಜಾಗತಿಕ ಕ್ರೀಡಾ ಮಹಾಶಕ್ತಿಯನ್ನಾಗಿ ನಿರ್ಮಿಸಲು ಸಾಧ್ಯವಾಗುವ ಆಟಗಾರರ ಒಂದು ದೊಡ್ಡ ತಂಡ ಸೃಷ್ಟಿಯಾಗಲಿದೆ.

ಕಳೆದ ಕೆಲ ತಿಂಗಳುಗಳಲ್ಲಿ ನಡೆದ ಬಸ್ತರ್ ಮತ್ತು ಸರ್ಗುಜಾ ಒಲಿಂಪಿಕ್ಸ್‌ನಲ್ಲಿ ಏಳು ಲಕ್ಷ ಕ್ಕೂ ಹೆಚ್ಚು ಆಟಗಾರರು ಭಾಗವಹಿಸಿದ್ದಾರೆ. ಅವರಲ್ಲಿ ನಕ್ಸಲ್ ಹಾದಿ ತ್ಯಜಿಸಿ ಕ್ರೀಡೆಯ ಸಕಾರಾತ್ಮಕ ದಾರಿ ಆರಿಸಿಕೊಂಡ ಕೆಲ ಯುವಕರೂ ಇದ್ದಾರೆ.

ಕ್ರೀಡೆಯ ಮೂಲಕ ಯುವಜನರ ಶಕ್ತಿ ಸಕಾರಾತ್ಮಕ ಅಭಿವ್ಯಕ್ತಿ ಪಡೆಯುತ್ತದೆ. ಯುವ ಜನರಲ್ಲಿ ಕ್ರೀಡಾ ಪ್ರತಿಭೆಯನ್ನು ಗುರುತಿಸಿ ಅಭಿವೃದ್ಧಿಪಡಿಸುವ ಸರಕಾರದ ಪ್ರಯತ್ನಗಳು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಸ್ಪರ್ಧೆಗಳಲ್ಲಿ ಉತ್ತಮ ಫಲ ನೀಡಲು ಪ್ರಾರಂಭಿಸಿವೆ.

ಬುಡಕಟ್ಟು ಸಮುದಾಯಗಳು ಸೇರಿದಂತೆ ನಮ್ಮ ಯುವಜನರ ಕ್ರೀಡಾ ಪ್ರತಿಭೆ ನಮ್ಮ ರಾಷ್ಟ್ರಕ್ಕೆ ಅಮೂಲ್ಯ ಸಾಮಾಜಿಕ ಬಂಡವಾಳವಾಗಿದೆ. ಈ ಅಮೂಲ್ಯ ಸಂಪನ್ಮೂಲವನ್ನು ಪರಿಣಾಮಕಾರಿಯಾಗಿ ಬಳಸಿಕೊಂಡು ನಮ್ಮ ದೇಶವು ಕ್ರೀಡಾ ಕ್ಷೇತ್ರದಲ್ಲಿ ಅನೇಕ ಗೌರವಾನ್ವಿತ ಶ್ರೇಷ್ಠತೆಯ ಮಾನದಂಡಗಳನ್ನು ಸ್ಥಾಪಿಸಲಿದೆ ಎಂಬ ವಿಶ್ವಾಸ ನನಗಿದೆ. ಈ ನಂಬಿಕೆಯೊಂದಿಗೆ ನನ್ನ ಸಂದೇಶ ಇದಾಗಿದೆ: ಖೇಲೋ ಇಂಡಿಯಾ..! ಖೂಬ್ ಖೇಲೋ ಇಂಡಿಯಾ...!

- ದ್ರೌಪದಿ ಮುರ್ಮು

ಅಪ್ಪಂತನದ ವ್ಯವಸ್ಥೆಗೆ ಬೆತ್ತಲೆಯ ಗೀಳು!

ನಮ್ಮ ಮಟ್ಟಿಗೆ ಹೇಳುವುದಾದರೆ ಇಂದೊಂದು ತೀರಾ ಅಸಂಭಾವ್ಯವೂ, ಅಸಂಬದ್ಧವೂ ಆದ ಕಲ್ಪನೆಯಾಗಿದೆ. ಹನ್ನೆರಡನೆಯ ಶತಮಾನದಷ್ಟು ಹಿಂದಿನ ಆ ಪರಿಸರದಲ್ಲಿ ಹೆಣ್ಣೊಬ್ಬಳು ಅವಳೆಂಥ ಅನುಭಾವಿಯಾಗಿದ್ದರೂ, ಬೆತ್ತಲೆಯಾಗಿ, ಕೂದಲನ್ನು ಮರೆಮಾಡಿಕೊಂಡು ಸಂಚರಿಸಿದಳೆಂಬುದು ಅತ್ಯಂತ ಅಸಂಗತವೂ, ಅನುಚಿತವೂ ಆದ ಭ್ರಮಾಕಲ್ಪನೆಯಾಗಿ ಮಾತ್ರ ತೋರುತ್ತದೆ. ಈ ನಡೆವಳಿಕೆ ವೀರಶೈವ ಧರ್ಮಕ್ಕೆ ಸಂಪೂರ್ಣ ವಿರುದ್ಧ ಮಾತ್ರವಲ್ಲದೆ ವೈಯುಕ್ತಿಕವಾಗಿ ಮತ್ತು ಸಾಮಾಜಿಕವಾಗಿ ಕೂಡ ಹೆಣ್ಣಿಗೆ ಕ್ಷೇಮಕರವಾದದ್ದಲ್ಲ.

ಈ ಲೇಖನದಲ್ಲಿ (ಅರೆ) ಬೆತ್ತಲಾಗಿ ನಡೆದಳು ಎನ್ನಲಾದ ಅಕ್ಕಮಹಾದೇವಿ ಎಂಬ ವಚನಕಾರ್ತಿಯ ಬಗೆಗಿನ ದಂತಕಥೆಯನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸಲಾಗಿದೆ. ಇದೇ ಮೊದಲ ಪ್ರಯತ್ನವೇನೂ ಅಲ್ಲ, ಆದರೆ ಇಂಗ್ಲೀಷಿನಲ್ಲಿ ಬಂದಿರುವ ಅಕ್ಕನ ಕಥನಗಳನ್ನು ಸಹ ವಿಮರ್ಶಾತ್ಮಕ ದೃಷ್ಟಿಯಿಂದ ನೋಡಲು ಪ್ರಯತ್ನಿಸಿರುವುದು ಹೊಸತಿರಬಹುದೇನೋ, ಗೊತ್ತಿಲ್ಲ. ಅದಕ್ಕೆ ನಿದರ್ಶನವಾಗಿ ಒಂದು ಕೃತಿಯನ್ನು ಇಲ್ಲಿ ಉದಾಹರಿಸಿ ನಂತರ ಅಕ್ಕ ಚರಿತ್ರೆಯಲ್ಲಿ ಸಾಗಿ ಬಂದ ಕಡೆಗೆ ಕಣ್ಣು ಹಾಯಿಸುವ ಪ್ರಯತ್ನವಿದೆ.

ಅಕ್ಕನ ನೆಪದಲ್ಲಿ ನಡೆದಿರುವ ಇಂಗ್ಲಿಷ್ ಭಾಷೆಯಲ್ಲಿನ ಅಧ್ಯಯನಗಳ ಉದ್ದೇಶಿತ ಓದುಗರು ಅಂತಾರಾಷ್ಟ್ರೀಯ ನೆಲೆಯಲ್ಲಿ ಇರುತ್ತಾರೆ. ಅವರು ಏರ್ಪೋರ್ಟಿನಲ್ಲಿ ಇರುವ ಅಂಗಡಿಗಳಲ್ಲಿ ಭಾರತೀಯವನ್ನು ಆದಷ್ಟೂ ಮಟ್ಟಿಗೆ ಸಿಂಗಲ್ ಪ್ಯಾಕೇಜಿನಲ್ಲಿ ಕೊಳ್ಳಲು ಇಚ್ಛಿಸುತ್ತಾರೆ. ಅಲ್ಲಿ ಸಲ್ಲುವ ಅಕ್ಕ ಬೇರೆಯ ತರದವಳು. ಆ ಅಕ್ಕಳನ್ನು ಉದಾರವಾದಿ ಹಿಂಸೆಯ ನಿದರ್ಶನವಾಗಿ ಸಹ ನೋಡಬಹುದು. ಹನ್ನೆರಡನೆಯ ಶತಮಾನದಲ್ಲಿ ಹೆಣ್ಣೊಬ್ಬಳು ಬೆತ್ತಲಾಗಿ ನಡೆಯಬಹುದಾದಂತಹ ಪ್ರಗತಿಪರ ಸಮಾಜ ನಮ್ಮಲ್ಲಿತ್ತು ಎಂದು ಅಂತಾರಾಷ್ಟ್ರೀಯ ಓದುಗ ಸಮುದಾಯಕ್ಕೆ ಸಾರುವ ಹಂಬಲವೇ?

ಸ್ಕೈ ಕ್ಲಾಡ್ - ಎಂಬ ಕೃತಿಯ ಈ ಭಾಗವನ್ನು ಗಮನಿಸಿ:

ಅನುಭವಮಂಟಪದ ಶಿವಶರಣರಿಗೆ ಮಹಾದೇವಿ ಕಲ್ಯಾಣದತ್ತ ಹೊರಟು ಬರುತ್ತಿರುವುದು ಗೊತ್ತಿತ್ತು ಎಂದು ದಂತಕತೆ ಹೇಳುತ್ತದೆ. ಅವಳು ಕಲ್ಯಾಣವನ್ನು ತಲುಪಿದಾಗ ಗುರಿಮುಟ್ಟಿದ ಸಂತಳಂತೆ ಅಲ್ಲದಿದ್ದರೂ ಸಹ ಅಧ್ಯಾತ್ಮಾರ್ಥಿಯಾಗಿ ಅವಳಿಗೆ ಪ್ರಚಂಡ ಸ್ವಾಗತ ಸಿಕ್ಕಿದ್ದಿರಬಹುದು. ನ ಭೂತೋ! ಎಂಬ ಈ ಗಳಿಗೆಗೆ ಸಾಕ್ಷಿಯಾಗಲು ಮಾಡುತ್ತಿದ್ದ ಮನೆಕೆಲಸಗಳನ್ನು ಬಿಟ್ಟು ಹೆಂಗಸರೆಲ್ಲರೂ ತತ್ತರಬತ್ತರ ಮುಂಬಾಗಿಲಿಗೆ ಓಡಿ ಬಂದು ನಿಂತಿರಬಹುದೇ? ಬೀದಿಯ ಗಂಡಸರು ಮಾತು ಕಳೆದು ನಿಂತರೇ? ಆಡುತ್ತಿದ್ದ ಮಕ್ಕಳು ಬಿಟ್ಟಬಾಯಿ ಬಿಟ್ಟಂತೆ ಮೂಕರಾದರೆ? ಈ ವಿಚಿತ್ರ ಆದರೆ ಅದ್ಭುತ ದೃಶ್ಯಕ್ಕೆ ಎಲ್ಲರೂ ಮರುಳಾದರೆ?

ನೀಳವಾದ ಕೂದಲನ್ನು ಹರಡಿಕೊಂಡು ಬೀದಿಯಲ್ಲಿ ನಡೆದು ಬರುತ್ತಿರುವ ಮಹಾದೇವಿಯನ್ನು ಕಲ್ಪಿಸಿಕೊಳ್ಳಿ. ಅವಳ ಹಿಂದೆ ಅಭಿಮಾನಿಗಳು ಮತ್ತು ಹಿಂಬಾಲಿಗರು ಧೀಯೆಂದು ತಲೆಯೆತ್ತಿಕೊಂಡು ಬೆಳಗಿನ ಸೂರ್ಯನಂತಹ ಫಳ್ಳನೆಯ ನಗು ಬೀರುತ್ತಾ ಹೆಜ್ಜೆ ಹಾಕುತ್ತಿರುವುದನ್ನು ಊಹಿಸಿಕೊಳ್ಳಿ. ಕಳ್ಳ ದೃಷ್ಟಿಯಲ್ಲಿ ಅವಳ ದೇಹವನ್ನು ಅಳೆಯುತ್ತಾ, ಕೆಮ್ಮಿ, ಕ್ಯಾಕರಿಸಿ, ಕುಹಕದಿಂದ ನಕ್ಕವರೂ ಸಹ ಇದ್ದಿರಬಹುದು. ಆದರೆ ಈ ಅಪೂರ್ವ ದೃಶ್ಯದೆದುರು ಬೆರಗಿನಲ್ಲಿ ಮುಂದಡಿ ಇಡಲಾಗದೆ ಉಳಿದವರೂ ಸಹ ಇದ್ದರಲ್ಲ? ಸುದ್ದಿ ಕೇಳಿ ಬೀದಿಗೆ ಇಳಿದವರು ಅದೆಷ್ಟು ಮಂದಿಯೋ! ಕಾರ್ಯಪ್ರವೃತ್ತರಾದ ಸೈನಿಕರು ಜನಜಂಗುಳಿಯನ್ನು ಹಿಡಿತಕ್ಕೆ ತರಲಾಗದೆ ಒದ್ದಾಡಿರಬಹುದು! ಕೆಲವರು, ವಿಶೇಷವಾಗಿ ಹೆಂಗಸರು, ಮಹಾದೇವಿಯ ಕಾಲನ್ನು ಮುಟ್ಟಿ ನಮಸ್ಕರಿಸಿ ಧನ್ಯರಾಗಲು ನಾಮುಂದು ತಾಮುಂದು ಎಂದು ಮುಗಿಬಿದ್ದಿರಬಹುದು!

ಈ ಮಂದಿ ಮಹಾದೇವಿಗೆ ಉಘೇ ಉಘೇ ಎನ್ನುತ್ತಾ ಬಾಜಾಬಜಂತ್ರಿಗಳನ್ನು ತರಲು ಓಡಿದ್ದಿರಬಹುದು. ಶರಣರ ಎದೆ ತುಂಬಿ ಬಂದು ಓಂ ನಮಃ ಶಿವಾಯ ಎಂದು ಒಕ್ಕೊರಲಿನಿಂದ ಸ್ತುತಿಸಿರಬಹುದು. ಯಾರಿಗೆ ಗೊತ್ತು, ರಣರಂಗದಿಂದ ವಿಜಯಿಯಾಗಿ ಬಂದ ಚಕ್ರವರ್ತಿಯನ್ನು ಸ್ವಾಗತಿಸುವ ರೀತಿಯ ಸಂಭ್ರಮ ಅಲ್ಲಿ ತಾನೇ ತಾನಾಗಿ ಮೆರೆದಿದ್ದಿರಬಹುದು!

ಹೌದೆ? ಈ ತರಹದ ಕಲ್ಪನೆಗೆ ಚಾರಿತ್ರಿಕ ಆಧಾರ ಅಲ್ಪಸ್ವಲ್ಪವಾದರೂ ಇರಬಹುದೇ? ಕಾಲ್ಪನಿಕತೆಗೆ ಸಹ ಚರಿತ್ರೆಯ ಹಂಗು ಅಷ್ಟಿಷ್ಟಾದರೂ ಇರಬೇಕಲ್ಲ? ಇಲ್ಲಿ ಅಕ್ಕ ಮಹಾದೇವಿಯ ನೆಪದಲ್ಲಿ ವಚನ, ದ್ವೈತ, ಅದ್ವೈತ, ಉಪನಿಷತ್ತು, ಆಂಡಾಳ್, ಲಲ್ಲಾ, ಯು ಜಿ ಕೃಷ್ಣಮೂರ್ತಿ ಇತ್ಯಾದಿ ಹತ್ತು ಹಲವಾರುಗಳ ಕಲಸುಮೇಲೋಗರ ಮಾಡಿ ಬಡಿಸುವ ಉದ್ದೇಶ ಏರ್ಪೋರ್ಟ್ ಮಂದಿಗೆಂದೇ?

ಅಕ್ಕನನ್ನು ಬೆತ್ತಲಾಗಿಸಿದ್ದು ಕೌಶಿಕ ಒಬ್ಬನೇ ಅಲ್ಲ!

ಹನ್ನೆರಡನೆಯ ಶತಮಾನದ ಕಡಲುಗಟ್ಟಿ ನಿಂತಿದ್ದ ಕೋಟಿಗಟ್ಟಲೆ ವಚನಗಳು ಶತಮಾನಗಳ ನಂತರ ಸಿಕ್ಕಿರುವುದು ಕುಡಿತೆಯಷ್ಟು ಮಾತ್ರ. ಕನ್ನಡನಾಡಿನ ಆದ್ಯಂತ ವಿದ್ವಾಂಸರು ಪರ್ಯಟನ ಮಾಡಿ ಓಲೆಯ ಅಥವಾ ಕತ್ತೆಕಾಗದದ ಗ್ರಂಥಗಳನ್ನೆಲ್ಲಾ ಸಂಚಯನ ಮಾಡಿ ಅವುಗಳಲ್ಲಿನ ವಚನಸಾಹಿತ್ಯವಷ್ಟನ್ನೂ ಪ್ರಕಟಿಸಿದರೂ ಮೊತ್ತದಲ್ಲಿ ಅದು 10-12 ಸಹಸ್ರಕ್ಕಿಂತ ಹೆಚ್ಚಾಗದು.

ಹೀಗೆ ಸ್ವಲ್ಪ ಸಿಕ್ಕಿದೆಯೆಂದ ಮಾತ್ರಕ್ಕೆ ಅದರ ಮಹತ್ವವೇನೂ ಕಮ್ಮಿಯಲ್ಲ. ಆದರೆ ಸಿಕ್ಕಿರುವುದೆಲ್ಲ ಸಂಗ್ರಾಹಕರ ರುಚಿಗೆ, ವಾದಕ್ಕೆ ಅಳವಡುವಂತಹವಷ್ಟು ಮಾತ್ರ ಎಂಬ ಸತ್ಯವನ್ನು ಕಡೆಗಣಿಸಬಾರದು. ಅಷ್ಟೇ ಅಲ್ಲ, ಸಿಕ್ಕವೂ ಸಹ ಯಾರ ಯಾರ ಸಂಪಾದನೆಯಲ್ಲಿ ಯಾವ್ಯಾವ ರೀತಿಯ ಬದಲಾವಣೆಗಳಿಗೆ ಒಳಗಾದವು ಎಂಬ ಪ್ರಶ್ನೆಯಂತೂ ಇನ್ನಷ್ಟು ಮಹತ್ವದ್ದು.

ಅಂತಹ ಜಿಜ್ಞಾಸೆ ಕೇವಲ ವಚನಸಾಹಿತ್ಯಕ್ಕೆ ಸೀಮಿತವಾದದ್ದಲ್ಲ. ವೇದ, ವೇದಾಂತ, ಆಗಮ, ಪುರಾಣ, ಶಾಸ್ತ್ರ, ಅಷ್ಟೇ ಏಕೆ, ಮೌಕಿಕ, ಲಿಖಿತ ಆಕರಗಳಲ್ಲಿ ಸಿಕ್ಕವಕ್ಕೂ ಸಹ ಅನ್ವಯಿಸುತ್ತವೆ. ಹೆಚ್ಚು ಪ್ರಶ್ನೆ ಕೇಳಿದರೆ ಋಷಿ ಮೂಲ, ನದಿ ಮೂಲಗಳನ್ನು ಪ್ರಶ್ನಿಸಲು ಹೋಗಬಾರದು ಎಂಬ ವಿವೇಕವನ್ನು ಹೇಳಿ ಬಾಯಿ ಮುಚ್ಚಿಸಲಾಗುತ್ತದೆ.

ಇರಲಿ, ವಚನಗಳು ಶತಮಾನಗಳನ್ನು ಹಾದುಬಂದ ಇತಿಹಾಸ; ಮತ್ತು ಸಿಕ್ಕ ಮೇಲೂ ಅದರ ಹಿಂದಿದ್ದ ಆಯ್ಕೆಯ ಒತ್ತಡಗಳು; ಒಂದಕ್ಕಿಂತ ಹೆಚ್ಚು ಹಸ್ತಪ್ರತಿ ಆಕರಗಳು; ಮಾಸಿದ ಅಕ್ಷರಗಳು; ಅರ್ಥೈಸಿಕೊಳ್ಳುವಾಗ ಪದಗಳಿಗೆ ಇರುವ ಅರ್ಥ-ಬಹುಳತೆ ಒಡ್ಡಿರಬಹುದಾದ ದ್ವಂದ್ವಗಳು; ಇತ್ಯಾದಿ ವಾಸ್ತವಾಂಶಗಳನ್ನು ಸುಲಭವಾಗಿ ಪಕ್ಕಕ್ಕೆ ಸರಿಸುವುದು ಸುಲಭವಲ್ಲ, ಬೌದ್ಧಿಕ ಪ್ರಾಮಾಣಿಕತೆ ಅದನ್ನು ಒಪ್ಪುವುದೂ ಇಲ್ಲ.

ವಚನ ಸಾಹಿತ್ಯದ ಪಿತಾಮಹ ಎಂದೆನಿಸಿಕೊಂಡಿರುವ ಫ.ಗು. ಹಳಕಟ್ಟಿ ಈ ನೆಲೆಯಲ್ಲಿ ಅತ್ಯಂತ ಮಹತ್ವದ ಹೆಸರು. 1923 ರಲ್ಲಿ ಪ್ರಕಟವಾದ ತಮ್ಮ ವಚನಶಾಸ್ತ್ರಸಾರದ ಪ್ರಥಮ ಭಾಗದ ಮುನ್ನುಡಿ (ಪುಟ 4-5) ಯಲ್ಲಿ ಹೇಳಿಕೊಂಡಿರುವಂತೆ ಅವರು ಮೊದಲಿಗೆ ವಿಜಾಪುರ ಜಿಲ್ಲೆಯಲ್ಲಿ ಶರಣ ಸಾಹಿತ್ಯ

ಸಂಶೋಧನೆಗಾಗಿ ಪ್ರವಾಸ ನಡೆಸಿದಾಗ ಸಿಕ್ಕ ಎಲ್ಲ ವಚನಗಳನ್ನೂ ಸಂಗ್ರಹಿಸದೆ, ತಮಗೆ ಮಹತ್ವವೆಂದು ಕಂಡ ವಚನಗಳನ್ನಷ್ಟೇ ಬರೆದಿಟ್ಟುಕೊಂಡರು. ಹೀಗಾಗಿ ಅವರ ಮೂಲಕ ಕೈಗೆ ಬಂದ ವಚನಾಮೃತದ ತುತ್ತುಗಳಲ್ಲಿ ಬಹುಪಾಲು ಜನತೆಯ ಬಾಯಿಗೆ ಬರದೆಹೋದವು.

ಇದು ಕೇವಲ ಒಂದೇ ಒಂದು ನಿದರ್ಶನ. ಅಲ್ಲಿ ತಪ್ಪು ಹೊರೆಸುವ ಉದ್ದೇಶವಂತೂ ಅಲ್ಲ. ಹನ್ನೆರಡನೆಯ ಶತಮಾನದ ಕನ್ನಡನಾಡಿನಲ್ಲಿ ನಡೆದ ಒಂದು ಅದ್ಭುತ ಕ್ರಾಂತಿಯ ಬಗೆಗಿನ ಮಾಹಿತಿ ಶತಮಾನಗಳ ಮಟ್ಟಿಗೆ ಎಲ್ಲೆಲ್ಲೋ ಹರಿದು ಹಂಚಿ ಹೋಗಿ, ಕಣ್ಣಿಗೆ ಕಾಣದಂತೆ ಅಡಗಿ, ಕೊನೆಗೆ ಬೆಳಕಿಗೆ ಬಂದಾಗ ಯಾವ ಯಾವ ರೂಪಗಳನ್ನು ತಳೆಯಿತು, ಯಾರು ಅದನ್ನು ಒಟ್ಟುಗೂಡಿಸಿದರು, ಬಿಟ್ಟು ಹೋದ ಮತ್ತು ಕಟ್ಟಿಕೊಂಡ ವಿವರಗಳು ಸಮುದಾಯದ ಅಸ್ಮಿತೆಗೆ ಹೇಗೆ ಒದಗಿ ಬಂದವು ಎಂಬುವುದರ ಬಗ್ಗೆ ಅಧ್ಯಯನಗಳು ನಡೆದಿವೆ.

ಅಲ್ಲಮ, ಬಸವ, ಅಕ್ಕಮಹಾದೇವಿ, ಚೆನ್ನಬಸವಣ್ಣ ಇತ್ಯಾದಿ ಪ್ರಮುಖರೆಂದು ಕರೆಯಲ್ಪಡುವ ವಚನಕಾರರೂ ಸೇರಿದಂತೆ ಅವರೆಲ್ಲ ಎಲ್ಲಿ ಹುಟ್ಟಿದರು; ಯಾವಾಗ ಹುಟ್ಟಿದರು; ಯಾರಿಗೆ ಹುಟ್ಟಿದರು; ಅವರ ಬದುಕು ಸಾಗಿ ಬಂದ ವಿವರಗಳೇನು ಇತ್ಯಾದಿ ಖಚಿತ ಚಾರಿತ್ರಿಕ ವಿವರಗಳು ಲಭ್ಯವೇ ಇಲ್ಲ. ಆದರೂ ಪಠ್ಯದ ಒತ್ತಡಗಳಿಗೆ ತಕ್ಕಂತೆ ಅಲ್ಲಲ್ಲಿ ಕೆಲವು ಸಂಶೋಧನೆಗಳನ್ನು ಆಧರಿಸಿ ವಿವರಗಳನ್ನು ಕೊಡಲಾಗಿದೆ. ಹಾಡಿ ಹಾಡಿ ರಾಗ ಹೊಮ್ಮಿದಂತೆ ಒಂದು ಚೌಕಟ್ಟು ಹೊಮ್ಮಿ ಅದರೊಳಗೆ ವಿವರಗಳು ಹೋಗಿ ತಮ್ಮ ತಮ್ಮ ಸ್ಥಾನಗಳನ್ನು ಆಕ್ರಮಿಸಿ ಕೂತಿವೆ.

ಉಡುತಡಿ ಎಂಬ ಗ್ರಾಮದಲ್ಲಿ ನಿರ್ಮಲಾ ಸೆಟ್ಟಿ ಮತ್ತು ಸುಮತಿದೇವಿ ಎಂಬ ದಂಪತಿಗಳಿಗೆ ಹುಟ್ಟಿದ ಮಗಳೇ ಮಹಾದೇವಿ, ಎಂದು ಮಕ್ಕಳು ಪರೀಕ್ಷೆಗೆ ಉರು ಹಚ್ಚಿದಂತೆ ನಮಗೂ ಉರು ಹೊಡೆದಿದ್ದನ್ನೇ ಹೇಳಿ, ನಂಬಿ ಅಭ್ಯಾಸ. ನೂರು ಬಾರಿ ಯಾರೋ ಹೇಳಿದರೆ ನೂರಾ ಒಂದನೆಯ ಬಾರಿಗೆ ಕೇಳಿದವರು ಅದನ್ನು ಪ್ರಶ್ನಿಸುವ ಗೋಜಿಗೆ ಯಾಕೆ ಹೋದಾರು?

ಹುಟ್ಟು, ಬಾಲ್ಯ, ಇತ್ಯಾದಿಗಳು ಕೊನೆಗೆ ಕೇವಲ ಹೆಸರುಗಳು. ದೇವರ ರೂಪಗಳು ಸಹ ನಮ್ಮ ಕಾಲ್ಪನಿಕತೆಯ ಫಲವೇ. ಗೋಪಾಲಕೃಷ್ಣ ಅಡಿಗರು ತಮ್ಮ ರಾಮನವಮಿ ಪದ್ಯದಲ್ಲಿ ಚಿತ್ತ ಹುತ್ತಗಟ್ಟದೆ ಕೆತ್ತಿತೇನು, ಪುರುಷೋತ್ತಮನ ಆ ಅಂತ ದಿವ್ಯ ರೇಖೆ? ಎನ್ನುವುದು ದಿವ್ಯರೂಪಗಳು ಹೊಮ್ಮುವುದು ನಮ್ಮ ಚಿತ್ತದಿಂದಲೇ ಎನ್ನುವುದನ್ನು ಸ್ಪಷ್ಟಪಡಿಸುತ್ತದೆ.

ಸಾಕಷ್ಟು ಚಾರಿತ್ರಿಕ ವಿವರಗಳು ಲಭ್ಯವಿಲ್ಲದಾಗ ದಂತಕತೆಗಳು ಹೊಮ್ಮಿ ಮೆರೆಯುತ್ತವೆ. ಇತಿಹಾಸದಲ್ಲಿ ಆಗಿ ಹೋಗಿರಬಹುದಾದ ವ್ಯಕ್ತಿಗಳ ರೂಪಗಳನ್ನು ಸಹ ಹೀಗೆ ಜನಮಾನಸದಲ್ಲಿ ಪ್ರತಿಷ್ಠಾಪಿಸುವ ಪ್ರಯತ್ನದ ಹಿಂದೆ ಹಲವಾರು ಸಾಮಾಜಿಕ ಮತ್ತು ಸಾಂಸ್ಕೃತಿಕ ಒತ್ತಡಗಳು ಕೆಲಸ ಮಾಡುತ್ತವೆ.

ಉದಾಹರಣೆಗೆ ಅಯೋಧ್ಯೆಯ ಹಿನ್ನೆಲೆಯಲ್ಲಿ ಹೊಮ್ಮಿದ ರಾಮ ಹೇಗಿದ್ದಾನೆ? ಕಣ್ತುಂಬ ಕರುಣೆ ತುಂಬಿದ ರಾಮನ ಅಕ್ಕಪಕ್ಕ ಇದ್ದ ಸೀತೆ, ಲಕ್ಷ್ಮಣ, ಮುಂದಿದ್ದ ಹನುಮಂತ ಎಲ್ಲರನ್ನೂ ಕಿತ್ತು ತೆಗೆದು ಸೀತಾರಾಮನನ್ನು ಕೇವಲ ಶ್ರೀರಾಮನನ್ನಾಗಿಸಿ ಕೈಗೆ ಬಿಲ್ಲುಬಾಣ ಕೊಟ್ಟು ಯುದ್ಧಭೂಮಿಯ ರಾಮನನ್ನಾಗಿಸಿದ್ದರ ಹಿಂದೆ ಯಾವ ರೀತಿಯ ಹುನ್ನಾರಗಳು ಕೆಲಸ ಮಾಡಿವೆ? ಹಾಗೆಯೇ, ಬಸವಣ್ಣ ಯಾಕೆ ಕುದುರೆಯ ಮೇಲೆ, ಸೊಂಟದಲ್ಲಿ ಖಡ್ಗವನ್ನು ಹೊತ್ತ ರೂಪದಲ್ಲಿ? ಮತ್ತೆ, ಎಲ್ಲ ರಚನೆಗಳನ್ನು ಮುಲಾಜಿಲ್ಲದೆ ಅಲ್ಲಗಳೆಯುವ ಅಲ್ಲಮನಿಗೆ ಗಡ್ಡ, ವಿಭೂತಿ, ಅರೆಗಣ್ಣು ಮುಚ್ಚಿದ ತನ್ಮಯತೆ? ಹಾಗೆಯೇ ಅಕ್ಕ ಯಾಕೆ (ಅರೆ) ಬೆತ್ತಲೆ?

ಸಂಯಮದ ವಿಶ್ಲೇಷಣೆಗೆ ನಮ್ಮ ರಾಷ್ಟ್ರಕವಿ ಜಿ ಎಸ್ ಶಿವರುದ್ರಪ್ಪರತ್ತ ತಿರುಗಬಹುದು. ಅವರು ಹೇಳುವಂತೆ ಅಕ್ಕ ಅಂದು ಬಸವಣ್ಣನವರ ವ್ಯಕ್ತಿ ಕೇಂದ್ರದಲ್ಲಿ ರೂಪುಗೊಂಡ ಶರಣ ಚಳುವಳಿಯ ಮೇಲೆ ಹಾದುಹೋದ ಒಂದು ಉಜ್ವಲವಾದ ಮಿಂಚಿನ ಗೆರೆ ಅಷ್ಟೇ. ಆಕೆಗೂ ಈ ಚಳುವಳಿಗೂ ಇದ್ದ ಸಂಬಂಧ ಕೇವಲ ಆಗಂತುಕವೂ, ತಾತ್ಕಾಲಿಕವೂ ಆಗಿತ್ತು.

ಮುಂದುವರೆಸಿ ಅಲ್ಲಮನದೂ ಸಹ ಇದೆ ಸ್ವರೂಪದ್ದಾಗಿತ್ತು ಎಂದು ಕವಿ ಹೇಳುತ್ತಾರೆ. ಆದರೆ ಅಲ್ಲಮ ಈ ಚಳುವಳಿಯಲ್ಲಿ ವಹಿಸಿದ ಪಾತ್ರ, ಅಕ್ಕನಾದಕ್ಕಿಂತ ಭಿನ್ನವಾದುದು ಹಾಗೂ ಮಹತ್ವದ್ದು. ಆತ ಅನುಭವ ಮಂಟಪದ ಅಧ್ಯಕ್ಷನಾಗಿ, ಗುರುವಾಗಿ, ಮಾರ್ಗದರ್ಶಕನಾಗಿ, ವಿಮರ್ಶಕನಾಗಿ ಪ್ರಭು ಎನ್ನುವ ಗೌರವಕ್ಕೆ ಪಾತ್ರನಾಗಿ, ಈ ಚಳುವಳಿಯೊಂದಿಗೆ ಹೆಚ್ಚು ಗಾಢವಾದ ಸಂಬಂಧವನ್ನು ಹೊಂದಿ ಕೆಲವು ಕಾಲವಾದರೂ ಜೊತೆಗೆ ಇದ್ದವನು. ಆದರೆ ಮಹಾದೇವಿ ಊಡುತಡಿಯಿಂದ ಶ್ರೀಶೈಲ ಶಿಖರಕ್ಕೆ ಬಿಟ್ಟ ಬೆಳಕಿನ ಬಾಣದಂತೆ ನೇರವಾಗಿ ಹೋರಾಟ ಹಾದಿಯಲ್ಲಿ, ಕಲ್ಯಾಣದ ಈ ಶರಣ ಕಿರಣ ಕೇಂದ್ರದಿಂದ ಆಕರ್ಷಿತಳಾಗಿ ಸ್ವಲ್ಪ ಕಾಲ ನಿಂತವಳು. ತನ್ನ ವ್ಯಕ್ತಿತ್ವ ಹಾಗೂ ಅನುಭಾವಿಕ ನಿಲುವುಗಳಿಂದ ಶರಣ ಸಮೂಹವನ್ನು ಬೆರಗುಗೊಳಿಸಿದಳು. ತನ್ನ ವೈರಾಗ್ಯ ಮತ್ತು ವೈಚಾರಿಕತೆಯ ಪರಿಣತಿಯಿಂದ ಅಕ್ಕ ಎಂದು ಕರೆಯಿಸಿಕೊಳ್ಳುವ ಗೌರವಕ್ಕೆ ಪಾತ್ರಳಾದವಳು.

ಅಂದರೆ ಅಕ್ಕನಿಗೆ ಕಲ್ಯಾಣದ ಅನುಭವ ಮಂಟಪ ಕೇವಲ ಒಂದು ತಂಗುದಾಣವಾಗಿದ್ದಿರಬಹುದು. ಆ ಅಲ್ಪಕಾಲದ ಎಳೆಯನ್ನೇ ಹಿಡಿದು ಅವಳ ಬಗ್ಗೆ ಬರೆದ ಅಪ್ಪಂತನದ ಸಮಾಜ ತಮ್ಮೆಲ್ಲ ಗೀಳುಗಳನ್ನೂ ಅವಳ ದೇಹದ ಮೇಲೆ, ಬದುಕಿನ ಮೇಲೆ ಆರೋಪಿಸಿ ನಮ್ಮನ್ನು ಬೆಚ್ಚಿಬೀಳಿಸುತ್ತದೆ. ಅತ್ಯಂತ ವೈಯುಕ್ತಿಕವಾದ ಅಕ್ಕನ ಆಧ್ಯಾತ್ಮ ಸಾಧನೆಯನ್ನು ಮತ್ತು ಗಾಢವಾದ ಅಂತರ್ಮುಖಿ ಪ್ರವೃತ್ತಿಯನ್ನು ನಂತರದ ಸಾಂಸ್ಥಿಕ ಅಗತ್ಯಗಳಿಗೆ ಹಿಗ್ಗಾಮುಗ್ಗಾ ಎಳೆಯುತ್ತದೆ.

ಬೆಳಕಿಗೆ ಬಂದ ಮೇಲೆ ಈ ಅಪ್ಪಂತನದ ಸಮಾಜಕ್ಕೆ ಅಕ್ಕನ ಬದುಕಿನ ಬಗ್ಗೆ ಕಾಡಿರುವ ಪ್ರಶ್ನೆಗಳಲ್ಲಿ ಎರಡು ಮುಖ್ಯವಾದದ್ದವು. ಒಂದು: ಅವಳಿಗೆ ಮದುವೆಯಾಗಿತ್ತೆ ಇಲ್ಲವೇ? ಎರಡು: ಆಕೆ ನಿಜವಾಗಿ ಬೆತ್ತಲೆ ನಡೆದಳೆ?

ಹೆಣ್ಣೆಂದರೆ ದೇಹ; ಹೆಣ್ಣೆಂದರೆ ಗಂಡ ಎಂಬ ಸಾಮಾಜಿಕ ಪರಿಕಲ್ಪನೆಗೆ ಈ ಗೀಳು-ದ್ವಯ ಸೃಷ್ಟೀಕರಣ ನೀಡಬಲ್ಲದು.

ಜಿಎಸ್ಸೆಸ್ ಅಕ್ಕನಿಗೆ ಮದುವೆಯಾಯಿತೆ ಇಲ್ಲವೇ ಎನ್ನುವುದು ಅವಳ ವ್ಯಕ್ತಿತ್ವದ ಮಹತ್ವವನ್ನು ಗುರುತಿಸಲು ಮಾನದಂಡವೇನಲ್ಲ ಎಂದು ಸ್ಪಷ್ಟಪಡಿಸುತ್ತಾರೆ. ಹರಿಹರನ ರಗಳೆಯ ನಂತರದಲ್ಲಿ ಹೆಚ್ಚಿನಂಶ ಅಕ್ಕನಿಗೆ ಮದುವೆಯಾಗಿರಲಿಲ್ಲ ಎಂದು ಚಿತ್ರಿಸುವ ಹಠವೇ ಯಾಕೆ ಪ್ರಾಧಾನ್ಯತೆಯನ್ನು ಪಡೆಯಿತು? ಯಾವ ಚಾರಿತ್ರಿಕ ಒತ್ತಡಗಳ ಸಲುವಾಗಿ? ಮೀಸಲಳಿಯದ ಅಕ್ಕನನ್ನು ಜನಮಾನಸದಲ್ಲಿ ಪ್ರತಿಷ್ಠಾಪಿಸಲು ಮೀಸಲು-ಗೀಳಿನ ಮಂದಿ ಶತಾಯಗತಾಯ ಪ್ರಯತ್ನಿಸಿರಬಹುದೆ?

ಇನ್ನು ಬತ್ತಲೆತನದ ಪ್ರಶ್ನೆ. ಹರಿಹರನ ಮಹಾದೇವಿಯಕ್ಕನ ರಗಳೆ ಆಕೆ ಬದುಕಿದ್ದಳು ಎನ್ನುವ ಕಾಲಕ್ಕೆ ಅತ್ಯಂತ ಹತ್ತಿರದ್ದು. ಅವನು ಸಹ ಆಕೆ ಬತ್ತಲೆಯಾಗಿ ನಡೆದಳೆಂದು ಹೇಳಿಲ್ಲ. ಆಕೆ ಕಲ್ಯಾಣಕ್ಕೆ ಬಂದಳೆಂದು ಸಹ ಹೇಳಿಲ್ಲ. ಹರಿಹರನ ಪ್ರಕಾರ ಅವಳು ನೇರವಾಗಿ ಹೋದದ್ದು ಶ್ರೀಶೈಲಕ್ಕೆ. ಬತ್ತಲೆತನದ ಬಗ್ಗೆ ಜಿಎಸ್ಸೆಸ್ ಸ್ಪಷ್ಟಪಡಿಸುವಂತೆ, ನಮ್ಮ ಮಟ್ಟಿಗೆ ಹೇಳುವುದಾದರೆ ಇಂದೊಂದು ತೀರಾ ಅಸಂಭಾವ್ಯವೂ, ಅಸಂಬದ್ಧವೂ ಆದ ಕಲ್ಪನೆಯಾಗಿದೆ.

ಹನ್ನೆರಡನೆಯ ಶತಮಾನದಷ್ಟು ಹಿಂದಿನ ಆ ಪರಿಸರದಲ್ಲಿ ಹೆಣ್ಣೊಬ್ಬಳು ಅವಳೆಂಥ ಅನುಭಾವಿಯಾಗಿದ್ದರೂ, ಬೆತ್ತಲೆಯಾಗಿ, ಕೂದಲನ್ನು ಮರೆಮಾಡಿಕೊಂಡು ಸಂಚರಿಸಿದಳೆಂಬುದು ಅತ್ಯಂತ ಅಸಂಗತವೂ, ಅನುಚಿತವೂ ಆದ ಭ್ರಮಾಕಲ್ಪನೆಯಾಗಿ ಮಾತ್ರ ತೋರುತ್ತದೆ. ಈ ನಡೆವಳಿಕೆ ವೀರಶೈವ ಧರ್ಮಕ್ಕೆ ಸಂಪೂರ್ಣ ವಿರುದ್ಧ ಮಾತ್ರವಲ್ಲದೆ ವೈಯುಕ್ತಿಕವಾಗಿ ಮತ್ತು ಸಾಮಾಜಿಕವಾಗಿ ಕೂಡ ಹೆಣ್ಣಿಗೆ ಕ್ಷೇಮಕರವಾದದ್ದಲ್ಲ.

ಅಷ್ಟೇ ಅಲ್ಲ, ಅಕ್ಕನ ವಚನಗಳಲ್ಲಿ ತನ್ನ ಬತ್ತಲೆತನದ ಬಗ್ಗೆ ಉಲ್ಲೇಖಗಳೇ ಇಲ್ಲ.

ಸಮಕಾಲೀನ ವಚನಕಾರ್ತಿಯರ ಯಾವ ವಚನಗಳಲ್ಲಿಯೂ ಈ ಕುರಿತು ಒಂದಾದರೂ ಪ್ರತಿಕ್ರಿಯೆ ದಾಖಲಾಗಿಲ್ಲ. ಜೊತೆಗೆ ಇತರ ಅನೇಕ ವಚನಕಾರರ ವಚನಗಳಲ್ಲಿ ಅವಳ ಬತ್ತಲೆತನದ ಬಗ್ಗೆ ಒಂದಾದರೂ ಉಲ್ಲೇಖವಿಲ್ಲ!

ಚೆನ್ನಮಲ್ಲಿಕಾರ್ಜುನನ ಬೆಳಗುನುಟ್ಟು ಲಜ್ಜೆಗೆಟ್ಟವಳಿಗೆ ಉಡುಗೆ ತೊಡುಗೆಯ ಹಂಗೇಕೋ? ಅಥವಾ ನಾನು ಸೀರೆಯನುಡುವ ಮುನ್ನವೇ ಜಂಗಮ ದೇವಾಗಂವ ನುಡಿಸುವೆ ಅಥವಾ ಉಡುವೆ ನಾನು ಲಿಂಗಕ್ಕೆಂದು, ತೊಡುವೆ ನಾನು ಲಿಂಗಕ್ಕೆಂದು ಎನ್ನುವುದೆಲ್ಲವೂ ನಿರ್ಲಕ್ಷ್ಯವೇ ಹೊರತು ನಿರಾಕರಣೆ ಅಲ್ಲ. ಇಷ್ಟಕ್ಕೂ ಅಕ್ಕನ ವಚನಗಳೇ ಅವಳ ಜೀವನ ಚರಿತ್ರೆ ಎಂದು ಭಾವಿಸುವ ಅತಿರೇಕವೇಕೆ? ಜೊತೆಗೆ ಅಕ್ಷರಶಃ ಅರ್ಥೈಸಿಕೊಳ್ಳುವ ಬೌದ್ಧಿಕ ಹಠವೇಕೆ?

ಈ ಹಿಗ್ಗಾಮುಗ್ಗಾ ಜಗ್ಗುವ ಪ್ರಕ್ರಿಯೆ ಪ್ರಾರಂಭವಾಗಿದ್ದು ನಂತರದಲ್ಲಿಯೇ. ಅಂದರೆ ವಚನಗಳನ್ನು ಆಧರಿಸಿದ ನಂತರದ ಸೃಷ್ಟಿಯಲ್ಲಿ. ವಚನಗಳೇ ಎಷ್ಟರ ಮಟ್ಟಿಗೆ ಮೂಲ ಎಂಬ ಪ್ರಶ್ನೆ ಇದೆ. ಅಂಥಾದ್ದರಲ್ಲಿ ಬಿಟ್ಟು ಹೋದ, ಕಟ್ಟಲ್ಪಟ್ಟ, ಮತ್ತು ಸೇರಿಸಲ್ಪಟ್ಟ ವಚನಗಳನ್ನು ಆಧರಿಸಿ ಹೊಮ್ಮುವ ಸಂಪಾದನೆಗಳು ಬರೆದವರ ಅಥವಾ ಆಗಿನ ಕಾಲದ ಸಮಾಜದ ಅಗತ್ಯಗಳೇ ಹೊರತು ಅಕ್ಕನ ಬದುಕಿನ ಸ್ಪಷ್ಟೀಕರಣವಂತೂ ಆಗಲಾರದು.

ಆ ನಂತರದ ಸೃಷ್ಟಿಗಳನ್ನು ಇಲ್ಲಿ ಪ್ರಸ್ತಾಪಿಸುವುದು ಸೂಕ್ತ. ಆ ನಾಲ್ಕು ಶೂನ್ಯ ಸಂಪಾದನೆ ಎಂಬ ಅನುಸೃಷ್ಟಿ ಪ್ರತಿಭೆಗಳಲ್ಲಿ ಮೊದಲಿನವನಾದ ಶಿವಗಣ ಪ್ರಸಾದಿ ಮಹದೇವಯ್ಯ (ಸುಮಾರು 1460), ಅಕ್ಕ ಕಲ್ಯಾಣಕ್ಕೆ ಆಗಮಿಸಿದ ಪ್ರಕರಣವನ್ನು ನಾಟಕೀಯಗೊಳಿಸಿ,

ದಿಗಂಬರದುಡಿಗೆಯನುಟ್ಟು
ಕೇಶವೆಂಬ ಅಂಬರವಂ ಮುಸುಕಿಟ್ಟು
ಕರಸ್ಥಳದೊಳಿರ್ಪ ಇಷ್ಟಲಿಂಗದೊಳು ದೃಷ್ಟಿ ನೆಟ್ಟು,
ಭಾವಕರಿಗೊಂಡು
ಲೌಕಿಕದ ಲಜ್ಜಾಭಿಮಾನಮಂ ತೊರೆದು
ಭವಸಾಗರಮಂ ದಾಟಿ
ಚೆನ್ನಮಲ್ಲಿಕಾರ್ಜುನನ
ವಿಕಳಾವಸ್ಥೆಯೊಳು ತನ್ನ ಮರೆದು

ಎಂದು ವರ್ಣಿಸುತ್ತಾನೆ. ಇಷ್ಟಲಿಂಗದೊಳು ದೃಷ್ಟಿ ನೆಟ್ಟು, ಲಜಾಭಿಮಾನಮಂ ತೊರೆದು, ವಿಕಳಾವಸ್ಥೆಯೊಳು ತನ್ನ ಮರೆದು ಇತ್ಯಾದಿ ವಿವರಗಳನ್ನು ಗಮನಿಸಿ. ಈ ನಾಟಕೀಯತೆಗೆ ನಮ್ಮ ವ್ಯಾಪಾರಿ ಚಲನಚಿತ್ರಗಳ ಫಾರ್ಮುಲಾಗಳೂ ಸಹ ನಾಚಿಕೊಳ್ಳಬಹುದು.

ಹರಿಹರನ ರಗಳೆಯಲ್ಲಿ ಗುರುಗಳು ಬಂದಾಗ ಹಾಸಿಗೆಮನೆಯಲ್ಲಿ ಮಹಾದೇವಿ ಬೆತ್ತಲೆಯಾಗಿದ್ದದ್ದು; ಅವಳು ಸೀರೆ ಉಡಲು ಹೋದಾಗ ಕೌಶಿಕ ತೆಗೆತೆಗೆ ನಿನಗೆ ಸೀರೆಯೇಕೆ ಎಂದದ್ದು; ಆಕೆ ಕೇಶಾಂಬರಿಯಾಗಿ (ಒರಟಾದ ಉಣ್ಣೆಯ ಗೊಂಗಡಿಯನ್ನು ಹೊದ್ದು), ಇಷ್ಟಲಿಂಗವನ್ನು ಕೈಗೆತ್ತಿಕೊಂಡು ಶ್ರೀಶೈಲದತ್ತ ನಡೆದಿದ್ದು; ಇತ್ಯಾದಿ ವಿವರಗಳು ನಂತರದವರ ಕೈಗೆ ಸಿಕ್ಕಿ ಅಕ್ಕ ಬೆತ್ತಲಾಗಿ ಹಾದಿಯುದ್ದಕ್ಕೂ ನಡೆದಳು ಎಂದು ಚಿತ್ರಿಸುವ ವಿಕೃತಿಯನ್ನು ಮೆರೆದಿವೆ. ಅಷ್ಟೇ ಅಲ್ಲ, ಹಾದಿಯಲ್ಲಿ ಆಕೆಗೊಂದು ತಂಗುದಾಣವನ್ನು ದಯಪಾಲಿಸಿ ಅಲ್ಲಿಯ ಪ್ರಮುಖರ ಪ್ರಶ್ನೆಗಳನ್ನು ಆಕೆ ಬೆತ್ತಲಾಗಿ ನಿಂತು ಎದುರಿಸುವ ಧೈರ್ಯವನ್ನು ಸಹ ನೀಡಿವೆ.

ರಾಷ್ಟ್ರಕವಿಯ ಮಾತುಗಳನ್ನು ಮತ್ತೊಮ್ಮೆ ಹೇಳಬೇಕೆಂದರೆ, ಮುಂದೆ ಜನಮನದಲ್ಲಿ ಅಕ್ಕನನ್ನು ಕುರಿತು ಈ ಕೇಶಾಂಬರೆಯಾದ ಚಿತ್ರವೇ ಸ್ಥಾಯಿಯಾಗಿ ಉಳಿದು ಬಂದಿದೆ; ಚಿತ್ರಕಾರರು ಅಕ್ಕಮಹಾದೇವಿಯನ್ನು ಹೀಗೆಯೇ ಚಿತ್ರಿಸಿದ್ದಾರೆ. ಆದರೆ ಹೆಣ್ಣೊಬ್ಬಳು ಈ ಬಗೆಯ ಅವಸ್ಥೆ ಇಲ್ಲಿ ಇದ್ದಳೆಂಬುದು ಎಷ್ಟು ಸಂಭಾವ್ಯ ಹಾಗೂ ಉಚಿತ ಎಂಬುದರ ಬಗ್ಗೆ ಬಹು ಜನ ಗಂಭೀರವಾಗಿ ವಿಚಾರ ಮಾಡಿದಂತೆ ತೋರುವುದಿಲ್ಲ.

ಹಲಗೆಯಾರ್ಯರ ಶೂನ್ಯಸಂಪಾದನೆ ಇದನ್ನು ಅತಿರೇಕಕ್ಕೆ ಕೊಂಡೊಯ್ದು ತನ್ನ ಕಲ್ಪನೆಯ ವಿಕೃತವನ್ನು ಮೆರೆದಿದೆ. ಇಲ್ಲಿ ಅಕ್ಕನ ಪರೀಕ್ಷೆಗೆಂದು ಬಂದ (ಅಲ್ಲಮನೇ ಕಳಿಸಿದ್ದ ಎನ್ನುವ ಇನ್ನೊಂದು ಅತಿರೇಕ!) ಕಿನ್ನರಿ ಬೊಮ್ಮಯ್ಯ ಅಕ್ಕನ ಸರ್ವಾಂಗ ಸ್ಥಾನಮಾನಂಗಳಂ ಪರುಷಿಸಿ (ಪರೀಕ್ಷಿಸಿ) ನೋಡುತ್ತಾನೆ. ಅಲ್ಲಿ ದೇಹಾಭಿಮಾನಗಳಿಲ್ಲದಿರಲಾತಂ ಯೋನಿಯೊಳು ಅಂಗುಲಿ ಪ್ರವೇಶವಂ ಮಾಡಲು ಚಿದ್ರಸ್ಮ ಉದುರುವುದು ಕಂಡು ಕಿನ್ನರಿಗೆ ಜ್ಞಾನೋದಯವಾಯಿತಂತೆ!

ಕಿನ್ನರಿ ಬೊಮ್ಮಯ್ಯನ ಪ್ರಕರಣವನ್ನು ರೂಪಕವಾಗಿ ಅರ್ಥೈಸಿಕೊಳ್ಳಬೇಕು ಎಂದು ಹಲವಾರು ವಿಮರ್ಶಕರು ವಾದಿಸಿದ್ದಾರೆ. ಅಕ್ಕನ ಲಜ್ಜೆಗೆಟ್ಟವಳಿಗೆ ಇತ್ಯಾದಿಗಳನ್ನು ಅಕ್ಷರಶಃ ಅರ್ಥೈಸುವವರು ಎಲ್ಲಿ ರೂಪಕ, ಎಲ್ಲಿ ಪದಶಃ ಎಂದು ನಿರ್ಧರಿಸುವ ಸ್ವಾತಂತ್ರ್ಯವನ್ನು ಕಾಯ್ದಿರಿಸಿಕೊಂಡಿದ್ದಾರೆಯೇ?

ಕಿನ್ನರಿಯ ಎದುರು ಯೋನಿ-ಪರೀಕ್ಷೆ, ನಂತರ ಬಸವಾದಿ ಪ್ರಮಥರ ಎದುರು ಸತ್ವಪರೀಕ್ಷೆ! ಸುಮಾರು ಎಂಟುನೂರು ಕಿಮೀಗಳ ಹಾದಿಯಲ್ಲಿ ಒಂಟಿ ಹೆಣ್ಣೊಬ್ಬಳು ಬಟ್ಟೆ ತೊಟ್ಟಿದ್ದರೂ ಸಹ ಎದುರಿಸಬೇಕಾಗಿದ್ದ ಪರೀಕ್ಷೆಗಳು ಸಾಲದು ಎಂದೇ? ಐತಿಹಾಸಿಕ ದೃಷ್ಟಿಯಿಂದ ಯಾವ ವಿವರಗಳನ್ನೂ ನೀಡದ ಈ ಸಂಪಾದನೆಗಳ ಉದ್ದೇಶ ಏನಿತ್ತು ಎಂಬ ಪ್ರಶ್ನೆಯಂತೂ ಮೂಡುತ್ತದೆ. ಸಮಕಾಲೀನರು ಅಂತನ್ನಿಸಿಕೊಳ್ಳುವವರು ಸಹ ಸೇರಿದಂತೆ ಇತಿಹಾಸವನ್ನೂ ಪುರಾಣವಾಗಿಸುವ ಮಂದಿಗಳ ಕಥನಗಳಲ್ಲಿ ಹೊಮ್ಮಿರುವ ಅಕ್ಕ ಎಷ್ಟು ನಿಜವೋ ಎಂದು ಗೊಂದಲವಾಗುತ್ತದೆ.

ಜನಪದ ಸಾಹಿತ್ಯದಲ್ಲಿ ಇರುವ ಅಕ್ಕ ಬೇರೆಯೇ. ಅಲ್ಲಿ ದಿನನಿತ್ಯದ ಶ್ರಮದ ಬದುಕಿಗೆ ಶರಣರ ಬಗೆಗಿನ ಹಾಡುಗಳು ಹಾಯೆನ್ನಿಸುವಂತೆ ಒದಗಿ ಬರುತ್ತವೆ.

ಶರಣೆಂದೆ ಮಲ್ಲಯ್ಯಗೆ / ಶರಣೆಂದೆ ಗುರುವೀಗೆ /
ಶರಣೆಂದೆ ಮಲ್ಲಯ್ಯನ ಮಡದಿ ಮಾದೇವಿಗೆ
ಶರಣೆಂದು ಕಲ್ಲ ಹಿಡಿದೇನು/
ಅಷ್ಟೇ ಅಲ್ಲ, ಅಕ್ಕನನ್ನು ನೆನೆವ ಪದ ಶಿವಪದಕ್ಕಿಂತಲೂ ಮಿಗಿಲು.
ಶಿವ ಶರಣೆ ನಿನಹಾಡು/ ಭವದೊಳಗೆ ಹಾಡುವುದು
ಶಿವ ಪದಕೆ ಮಿಗಿಲು /ನಿತ್ಯದಲಿ ಕೊನೆಯುಂಟೆ
ಶಿವಭಕ್ತಿ ಸಾರ ಗಳಿಸುವುದಕೆ.

ಕೊನೆಗೆ ಜನಪದ ಸಂಶೋಧಕರು ಸ್ಪಷ್ಟವಾಗಿ ಹೇಳಿಬಿಡುತ್ತಾರೆ: ಪಂಡಿತರಲ್ಲದ ಪಾಮರರಾದ ಜನಪದ ಕವಿಗಳು ಅಕ್ಕಮಹಾದೇವಿಯ ಜೀವನ ಚಿತ್ರವನ್ನು ಅಶ್ಲೀಲ, ಅಸಭ್ಯತೆಗೆ ಆಸ್ಪದ ಕೊಡದಂತೆ ವೀರ ವಿರಾಗಿಣಿಯನ್ನಾಗಿ, ಆದರ್ಶನಾರಿಯನ್ನಾಗಿ, ಹೆಣ್ಣುಕುಲಕ್ಕೆ ಹೆಮ್ಮೆ ತರುವಂತ ಸ್ತ್ರೀರತ್ನವನ್ನಾಗಿ, ಸುಂದರವಾಗಿ ಚಿತ್ರಿಸಿರುವುದನ್ನು ನೋಡಿದರೆ ಆನಂದವಾಗುತ್ತದೆ.

ಅಕ್ಕನ ನೆಪದಲ್ಲಿ ಶರಣಕ್ರಾಂತಿಗೆ ಮೆರುಗು ನೀಡಲಾಗಿದೆ ಎಂಬ ವಿಚಾರವನ್ನು ಮರೆಯುವಂತಿಲ್ಲ. ಇನ್ನೊಬ್ಬ ಚಿಂತಕರು ಹೇಳುವಂತೆ, ನಾರಿಯೊಬ್ಬಳನ್ನು ತಮ್ಮ ಕಾವ್ಯದ ದಾರಿಯನ್ನಾಗಿ ಮಾಡಿಕೊಂಡ ಈ ಶಿವಕವಿಗಳಿಗೆ ಶಿವಶರಣರ ಕ್ರಾಂತಿಯ ಗಾಢ ಪ್ರಭಾವ ಆದಂತಿದೆ ಸ್ತ್ರೀಸಮಾಜಕ್ಕೆ ಸತ್ ಕೀರ್ತಿ ತಂದ ಮಹಾದೇವಿಯನ್ನು ಕಾವ್ಯದ ನಾಯಕಿಯನ್ನಾಗಿ ಮಾಡಿಕೊಂಡ ಕವಿಗಳು ಭಕ್ತೆ, ವಿರಕ್ತೆ, ವಿರಾಗಿಣಿಯಾಗಿ ಕಂಡಿದ್ದರೂ ಸಹ ಅಕ್ಕನ ನಿಜವಾದ ವ್ಯಕ್ತಿತ್ವ ಮೂಡಿ ಬಂದಿಲ್ಲ ಎನ್ನಬೇಕಾಗುತ್ತದೆ ಕಲ್ಪನೆಯ ಕುದುರೆಯನ್ನೇರದೆ ವೈಚಾರಿಕ ಅಧ್ಯಯನದಿಂದ ಅಕ್ಕನ ಚರಿತ್ರೆಯನ್ನು ಹುಡುಕುವುದಾದರೆ ಇಡೀ ಸ್ತ್ರೀ ಸಮಾಜಕ್ಕೆ ಮಹಾ ಉಪಕಾರ ಮಾಡಿದಂತಾಗುತ್ತದೆ. ಈ ನಿಟ್ಟಿನಲ್ಲಿ ಸಂಶೋಧನೆ ಮಾಡುವುದು ಅಗತ್ಯವಿದೆ.

- ಸುಕನ್ಯಾ ಕನಾರಳ್ಳಿ

ಭಾವ ಲಹರಿ

ಹಳದಿ ಅಥವಾ ಗಾಢ ಕೆಂಪು ಬಣ್ಣದ ಕಾರುಗಳು ಅಂದಿನ ಜನರ ಆಶಾವಾದಿ ಮತ್ತು ಬಂಡಾಯದ ಮನಸ್ಥಿತಿಯನ್ನು ಪ್ರತಿನಿಧಿಸುತ್ತಿದ್ದವು. 2010ರ ನಂತರ ಬಿಳಿ ಬಣ್ಣದ ಕಾರುಗಳ ಸಂಖ್ಯೆ ಹಠಾತ್ ಏರಿಕೆಯಾಯಿತು. ಐಫೋನ್ ಮತ್ತು ಆಧುನಿಕ ಗೆಜೆಟ್‌ಗಳ ಪ್ರಭಾವದಿಂದ ಬಿಳಿ ಬಣ್ಣವು ಸ್ವಚ್ಛತೆ, ತಂತ್ರಜ್ಞಾನ ಮತ್ತು ನಾವೀನ್ಯದ ಸಂಕೇತವಾಯಿತು.

ಕಾರಿನ ಬಣ್ಣವೂ, ದೇಶದ ಆರ್ಥಿಕತೆಯೂ

ಸಂಪಾದಕೀಯ ಸದ್ಯಶೋಧನೆ

ಕಾರಿನ ಬಣ್ಣಗಳು ಕೇವಲ ವೈಯಕ್ತಿಕ ಆಯ್ಕೆಯಲ್ಲ, ಅವು ಒಂದು ದೇಶದ ಆರ್ಥಿಕ ಸ್ಥಿತಿ, ಜನರ ಮಾನಸಿಕ ಸ್ಥಿತಿ ಮತ್ತು ಸಾಮಾಜಿಕ ಬದಲಾವಣೆಗಳ ಪ್ರತಿಬಿಂಬವಾಗಿರುತ್ತವೆ ಎಂದರೆ ನಂಬುತ್ತೀರಾ? ಆದರೆ ಇದು ನಿಜ. ಬ್ರಿಟನ್‌ನ ಇತಿಹಾಸವನ್ನು ಗಮನಿಸಿದರೆ, ಅಲ್ಲಿನ ರಸ್ತೆಗಳಲ್ಲಿ ಓಡಾಡುವ ಕಾರುಗಳ ಬಣ್ಣವು ಆಯಾ ಕಾಲಘಟ್ಟದ ರಾಷ್ಟ್ರೀಯ ಮನಸ್ಥಿತಿಯನ್ನು ಹೇಗೆ ಬಿಂಬಿಸುತ್ತವೆ ಎಂಬುದು ಅತ್ಯಂತ ಕುತೂಹಲಕಾರಿ ವಿಷಯ.

ಇಪ್ಪತ್ತನೇ ಶತಮಾನದ ಆರಂಭದಲ್ಲಿ, ಬ್ರಿಟನ್ ತನ್ನ ರಾಷ್ಟ್ರೀಯ ಹೆಮ್ಮೆಯನ್ನು ಬ್ರಿಟಿಷ್ ರೇಸಿಂಗ್ ಗ್ರೀನ್ ಮೂಲಕ ವ್ಯಕ್ತಪಡಿಸುತ್ತಿತ್ತು. ಆಂತರಾಷ್ಟ್ರೀಯ ರೇಸಿಂಗ್ ಪಂದ್ಯಗಳಲ್ಲಿ ಪ್ರತಿ ದೇಶಕ್ಕೂ ಒಂದು ಬಣ್ಣವಿತ್ತು. ಬ್ರಿಟನ್ ಗಾಢ ಹಸಿರು ಬಣ್ಣವನ್ನು ಆರಿಸಿಕೊಂಡಿತು.

ಆ ಸಮಯದಲ್ಲಿ ಹಸಿರು ಬಣ್ಣವು ಬ್ರಿಟನ್‌ನ ವಿಶ್ವಾಸ, ಸಂಪ್ರದಾಯ ಮತ್ತು ಜಗತ್ತಿನ ಮೇಲೆ ತನಗಿದ್ದ ಪ್ರಭಾವದ ಸಂಕೇತವಾಗಿತ್ತು. ಇದು ಬ್ರಿಟಿಷ್ ಎಂಜಿನಿಯರಿಂಗ್ ಚಾತುರ್ಯದ ಹೆಮ್ಮೆಯನ್ನು ಬಿಂಬಿಸುತ್ತಿತ್ತು.

ಇತ್ತೀಚಿನ ದಶಕಗಳಲ್ಲಿ ಬ್ರಿಟನ್‌ನ ರಸ್ತೆಗಳಲ್ಲಿ ಬೂದು, ಕಪ್ಪು ಮತ್ತು ಬಿಳಿ ಬಣ್ಣದ ಕಾರುಗಳೇ ಹೆಚ್ಚಾಗಿ ಕಾಣಸಿಗುತ್ತವೆ. ಬ್ರಿಟನ್ ಆರ್ಥಿಕ ಹಿಂಜರಿತ ಅಥವಾ ಅನಿಶ್ಚಿತತೆಯನ್ನು ಎದುರಿಸುವಾಗ, ಜನರು ಗಾಢವಾದ ಅಥವಾ ಆಕರ್ಷಕ ಬಣ್ಣಗಳ ಬದಲಿಗೆ ಬೂದು ಬಣ್ಣವನ್ನು ಆರಿಸಿಕೊಳ್ಳುತ್ತಾರೆ.

ಯಾಕೆಂದರೆ, ಬೂದು ಬಣ್ಣದ ಕಾರುಗಳಿಗೆ ಮರುಮಾರಾಟ ಮೌಲ್ಯ ಹೆಚ್ಚು. ಜನರು ಪ್ರಯೋಗಾತ್ಮಕವಾಗಿರಲು ಬಯಸದೇ, ಸುರಕ್ಷಿತವಾಗಿರಲು ಬಯಸುತ್ತಾರೆ ಎಂಬುದನ್ನು ಇದು ತೋರಿಸುತ್ತದೆ. ಪ್ರಸ್ತುತ ಬ್ರಿಟನ್‌ನಲ್ಲಿ ಗ್ರೇ ಅತ್ಯಂತ ಜನಪ್ರಿಯ ಬಣ್ಣವಾಗಿರುವುದು ಅಲ್ಲಿನ ಜನರ ಸಂಪ್ರದಾಯಬದ್ಧ ಮತ್ತು ಜಾಗರೂಕ ಮನಸ್ಥಿತಿಯನ್ನು ಸೂಚಿಸುತ್ತದೆ.

1960 ಮತ್ತು 70ರ ದಶಕಗಳಲ್ಲಿ ಬ್ರಿಟನ್‌ನಲ್ಲಿ ಕೆಂಪು ಮತ್ತು ನೀಲಿ ಬಣ್ಣದ ಕಾರುಗಳು ರಸ್ತೆಗಳಲ್ಲಿ ರಾರಾಜಿಸುತ್ತಿದ್ದವು. ಇದು ಸ್ವಿಂಗಿಂಗ್ ಸಿಕ್ಸ್‌ಟೀಸ್ ಕಾಲ. ಸಂಗೀತ, ಫ್ಯಾಷನ್ ಮತ್ತು ಕಲೆಗಳಲ್ಲಿ ಬ್ರಿಟನ್ ಹೊಸ ಎತ್ತರಕ್ಕೇರುತ್ತಿತ್ತು. ಜನರ ಜೀವನದಲ್ಲಿ ಉತ್ಸಾಹವಿತ್ತು, ಅವರು ಎದ್ದು ಕಾಣಲು ಬಯಸುತ್ತಿದ್ದರು.

ಹಳದಿ ಅಥವಾ ಗಾಢ ಕೆಂಪು ಬಣ್ಣದ ಕಾರುಗಳು ಅಂದಿನ ಜನರ ಆಶಾವಾದಿ ಮತ್ತು ಬಂಡಾಯದ ಮನಸ್ಥಿತಿಯನ್ನು ಪ್ರತಿನಿಧಿಸುತ್ತಿದ್ದವು. 2010ರ ನಂತರ ಬಿಳಿ ಬಣ್ಣದ ಕಾರುಗಳ ಸಂಖ್ಯೆ ಹಠಾತ್ ಏರಿಕೆಯಾಯಿತು. ಐಫೋನ್ ಮತ್ತು ಆಧುನಿಕ ಗೆಜೆಟ್‌ಗಳ ಪ್ರಭಾವದಿಂದ ಬಿಳಿ ಬಣ್ಣವು ಸ್ವಚ್ಛತೆ, ತಂತ್ರಜ್ಞಾನ ಮತ್ತು ನಾವೀನ್ಯದ ಸಂಕೇತವಾಯಿತು.

ಬ್ರಿಟಿಷರು ತಂತ್ರಜ್ಞಾನದ ಕಡೆಗೆ ಹೆಚ್ಚು ಒಲವು ತೋರುತ್ತಿರುವುದನ್ನು ಮತ್ತು ಸರಳತೆಯತ್ತ ಸಾಗುತ್ತಿರುವುದನ್ನು ಇದು ಬಿಂಬಿಸುತ್ತದೆ. ಪ್ರಸ್ತುತ ಬ್ರಿಟನ್‌ನಲ್ಲಿ ಪರಿಸರ ಮಾಲಿನ್ಯದ ಬಗ್ಗೆ ಜಾಗೃತಿ ಹೆಚ್ಚುತ್ತಿದೆ. ಈ ಹಸಿರು ಮನಸ್ಥಿತಿ ಕಾರುಗಳ ಆಯ್ಕೆಯಲ್ಲೂ ಬದಲಾವಣೆ ತರುತ್ತಿದೆ.

ಜನರು ಈಗ ಪರಿಸರಸ್ನೇಹಿ ವಾಹನಗಳನ್ನು ಪ್ರದರ್ಶಿಸಲು ಆರ್ಥಿ ಟೋನ್ಸ್ ಅಥವಾ ಪ್ರಕೃತಿಗೆ ಹತ್ತಿರವಾದ ಬಣ್ಣಗಳನ್ನು ಇಷ್ಟಪಡುತ್ತಿದ್ದಾರೆ. ಇದು ಹವಾಮಾನ ಬದಲಾವಣೆಯ ಬಗ್ಗೆ ಬ್ರಿಟನ್ ಹೊಂದಿರುವ ಕಳಕಳಿಯನ್ನು ತೋರಿಸುತ್ತದೆ. ಬ್ರಿಟನ್ನ ಕಾರುಗಳ ಬಣ್ಣದ ಇತಿಹಾಸವನ್ನು ಗಮನಿಸಿದರೆ, ದೇಶವು ಆರ್ಥಿಕವಾಗಿ ಸದೃಢವಾಗಿದ್ದಾಗ ಮತ್ತು ಜನರು ಸಂತೋಷವಾಗಿದ್ದಾಗ ರಸ್ತೆಗಳು ಬಣ್ಣಬಣ್ಣವಾಗಿರುತ್ತವೆ.

ಆದರೆ ಆರ್ಥಿಕ ಒತ್ತಡ ಅಥವಾ ಸಾಮಾಜಿಕ ಗೊಂದಲಗಳಿದ್ದಾಗ ಜನರು ಬೂದು ಅಥವಾ ಕಪ್ಪು ಬಣ್ಣದಂಥ ಗಂಭೀರ ಬಣ್ಣಗಳಿಗೆ ಮೊರೆ ಹೋಗುತ್ತಾರೆ. ಹೀಗೆ, ಕಾರಿನ ಬಣ್ಣಗಳು ಬ್ರಿಟಿಷ್ ಸಮಾಜದ ಒಂದು ಅನಧಿಕೃತ ಮನಸ್ಥಿತಿ ಮಾಪಕವಾಗಿ ಕೆಲಸ ಮಾಡುತ್ತವೆ.

ಬ್ರಿಟನ್ ಮತ್ತು ಭಾರತ-ಎರಡೂ ದೇಶಗಳ ಕಾರು ಮಾರುಕಟ್ಟೆಯಲ್ಲಿ ಕೆಲವು ಸಾಮ್ಯತೆಗಳಿದ್ದರೂ, ಬಣ್ಣಗಳ ಆಯ್ಕೆಯ ಹಿಂದಿರುವ ಕಾರಣಗಳು ಸಂಪೂರ್ಣವಾಗಿ ಭಿನ್ನವಾಗಿವೆ. ಬ್ರಿಟನ್‌ನಲ್ಲಿ ಬಣ್ಣವು ರಾಷ್ಟ್ರೀಯ ಮನಸ್ಥಿತಿ ಮತ್ತು ಆರ್ಥಿಕ ಭದ್ರತೆಯನ್ನು ಬಿಂಬಿಸಿದರೆ, ಭಾರತದಲ್ಲಿ ಅದು ಹವಾಮಾನ, ಧಾರ್ಮಿಕ ನಂಬಿಕೆ ಮತ್ತು ಪ್ರಾಯೋಗಿಕತೆಯನ್ನು ಅವಲಂಬಿಸಿದೆ.

ಬ್ರಿಟನ್‌ನಲ್ಲಿ ಕಾರಿನ ಬಣ್ಣಗಳು ಕಾಲಕಾಲಕ್ಕೆ ಬದಲಾಗುವ ದೇಶದ ಮೂಡ್ ಅನ್ನು ಬಿಂಬಿಸಿದರೆ, ಭಾರತದಲ್ಲಿ ಬಿಳಿ ಬಣ್ಣ ಎಂಬುದು ಒಂದು ಕಾಲಾತೀತ ಆಯ್ಕೆಯಾಗಿದೆ. ಬ್ರಿಟಿಷರು ತಮ್ಮ ಭಾವನೆಗಳನ್ನು ಬಣ್ಣಗಳ ಮೂಲಕ ವ್ಯಕ್ತಪಡಿಸಲು ಇಷ್ಟಪಟ್ಟರೆ, ಭಾರತೀಯರು ತಮ್ಮ ಬದ್ಧತೆ, ಆರ್ಥಿಕ ಜಾಣ್ಮೆ ಮತ್ತು ಹವಾಮಾನಕ್ಕೆ ತಕ್ಕ ಬದುಕನ್ನು ಬಿಳಿ ಬಣ್ಣದ ಮೂಲಕ ಕಂಡುಕೊಳ್ಳುತ್ತಾರೆ.

- ವಿಶ್ವೇಶ್ವರ ಭಟ್

ಕ್ಷಮೆ

ಶೇಖರನಿಗೆ ಇನ್ನೂ ಎರಡು ದಿನಗಳ ವಾರ ಕಡಿಮೆ ಬಿದ್ದಿತ್ತು. ಎಲ್ಲಿಯೂ ಹುಟ್ಟುವಂತೆ ತೋರಲಿಲ್ಲ. ಶ್ರೀಮಾನ್ ಪದ್ಮನಾಭ ಹೆಬ್ಬಾರರ ಮನೆಯಲ್ಲಿ ಕೇಳಬೇಕೆಂದು ನಾಲ್ಕಾರು ಸಲ ಯೋಚಿಸಿದ. ಆದರೆ ಅವರು ಭಿಕ್ಷುಕರನ್ನೂ, ವರ್ಗಣಿ ಕೇಳುವವರನ್ನೂ ವಾರದ ಮಾಣಿಗಳನ್ನೂ ಅಂಗಳಕ್ಕೂ ಬರಗೊಡುವದಿಲ್ಲವೆಂದು ಕೇಳಿದ್ದನಾದುದರಿಂದ ಹಿಂದೆ ಮುಂದೆ ನೋಡಿದ. ಹಸಿವೆಯೆಂದರೆ ಹಾಗೇ, ಎಲ್ಲಿಂದಲೋ ಶೇಖರನಿಗೆ ಧೈರ್ಯ ಬಂದಿತು. ಅಂದೇ ವಾರವೂ ಇಲ್ಲ, ಖಾನಾವಳಿಗೆ ಹೋಗಿ ಉಂಡುಬರಲು ಕಾಸೂ ಇತ್ತಿಲ್ಲ. ಬೆಳಗಿನಿಂದ ಹೊಟ್ಟೆಯಲ್ಲಿ ನೀರು, ಬರೇ ನೀರು.

ದಣಪೆಯನ್ನು ದಾಟಿ ಅಂಗಳಕ್ಕೆ ಕಾಲಿಡುವಾಗಲೇ ಹೆಬ್ಬಾರರ, ಗುಡುಗು ಕೇಳಿಬಂತು ಯಾರದು?

ನಾನು ಮೆಲ್ಲಗೆ ನುಡಿದ ಶೇಖರ. ಅವನ ಎದೆ ಟುಕುಟುಕು ಅನ್ನುತ್ತಿತ್ತು. ಕಾಲು ಸಾವಕಾಶವಾಗಿ ಹೊಳ್ಳಿಯನ್ನು ಸಮೀಪಿಸಿತು,

ನಾನು ಅಂದರೆ?

ವಿದ್ಯಾರ್ಥಿ

ಇದು ಸಾಲೆಯಲ್ಲ

ಗೊತ್ತಿದೆ. ಆದರೆ ನನಗೆ ಒಂದು ದಿನ ವಾರ..

ಓಹೋ! ಪಿತೃಗಳು ಮಾಡಿಟ್ಟು ಹೋದ ಆಸ್ತಿಯ ಹಕ್ಕೆಂದು ತೋರುತ್ತದೆ ವಾರ ಇವರಿಗೆ ಒಂದೇ ದಿನ ಉಳಿದಿದೆ.

ಎಲ್ಲರಿಗೂ ಹಾಗೇ, ಇನ್ನೂರನ್ನ ಏಜಂಟರಿಗೆ ಒಂದು ಲಕ್ಷ ಆಗಲು ಒಂದೇ ಸಾವಿರ ಕಡಿಮೆ! ವಾರದ ಮಕ್ಕಳಿಗೆ ಏಳೂ ದಿನ ಆಗಲಿಕ್ಕೆ ಒಂದೇ ದಿನ ಕಡಿಮೆ!!..

ಸತ್ಯಕ್ಕೂ ಇದೊಂದೇ ದಿನ.

ಸಾಧ್ಯವಿಲ್ಲವೆಂದು ಸ್ಪಷ್ಟ ಹೇಳಿದತನಕ ತಿಳಿಯುವದಿಲ್ಲವೇ?

ಹಳ್ಳಿಯವ ನಾನು. ಏನೋ ನಾಲ್ಕು ಅಕ್ಷರ ಕಲಿತು ಹೋಗುವ ಅಂತ ಬಂದಿದ್ದೇನೆ

ಎಲ್ಲರಿಗೂ ಈಗ ಇಂಗ್ಲೀಷು ಕಲಿಯುವದೊಂದು ಚಟ. ತಾವೇನು? ತಮ್ಮ ಯೋಗ್ಯತೆಯೇನು? ಇದಾವುದನ್ನೂ ನೋಡುವದೇ ಇಲ್ಲ. ಇಂಗ್ಲೀಷು ಅಂದರೆ ಅಷ್ಟು ಅಗ್ಗವೇ? ಬಂದು ನಮ್ಮಂಥವರಿಗೆ ಉಪದ್ರ ಕೊಡುವದು. ಇಂಗ್ಲೀಷು ಕಲಿಯದಿದ್ದರೆ ಸಾಯುತ್ತಾರೆಯೇ? ಅಲ್ಲೋ, ಏ. ನಿನ್ನ ಹೆಸರೇನು?

ಶೇಖರ

ಹುಂ, ಶೇಖರ, ನಿನಗೆ ತಂದೆ, ತಾಯಿ ಮನೆ ಮಾರು ಏನೂ ಇಲ್ಲವೇ?

ತಂದೆ ತಾಯಿ ಇದ್ದಾರೆ. ಒಂದು ತುಂಡು ತೋಟವಿದೆ. ಬಹಳ ಬಡತನ.

ಬಡವರಿಗೆ ಇಂಗ್ಲೀಷು ಬರೆದದ್ದಲ್ಲೋ. ಅಲ್ಲ, ನಿನ್ನ ತಂದೆ ಅಷ್ಟಿದ್ದರೆ ಸಾಲಮಾಡಿ ಕಲಿಸಬಾರದೇ? ಕಲಿತು ನೀನು ಕ ಲೆ ಕ್ಟ ರ ನಾ ಗ ಲಿ ದ್ದೀ ಯಾ? ಹೋಗು ಸುಮ್ಮನೆ. ಮನೆಗೆ ಹೋಗಿ, ಇರುವ ನಾಲ್ಕು ಅಡಿಕೆ ಮರಕ್ಕೆ ಎಲೆಯ ಬಳ್ಳಿ ಹಾಕಿ, ಕೋಡನ ಹಾಗೆ ಹತ್ತಿ ಕೊಟ್ಟಿ ಕೊನೆ ಮಾಡು. ಹರ ಹರ ಹೇಳಿ, ಗಂಜೀ ಉಂಡು ಸುಖವಾಗಿ ಇರು. ಅದನ್ನು ಬಿಟ್ಟು ಈ ಊರಿಗೆ ಬಂದು ನಾನು ಬಡವ; ಇಂಗ್ಲೀಷು ಕಲಿಯುತ್ತೇನೆ; ವಾರ ಕೊಡಿ ಎಂದು ಸಿಕ್ಕ ಸಿಕ್ಕವರನ್ನೆಲ್ಲ ಕಾಡಿದರೆ ಹೇಗೆ?

ಶೇಖರನು ಶಿಫಾರಸಿನ ಪತ್ರಗಳನ್ನು ಹೆಬ್ಬಾರರ ಮುಂದಿಟ್ಟನು.

ಅಯ್ಯೋ, ಈಗಿನ ದಿನದಲ್ಲಿ ಸರ್ಟಿಫಿಕೇಟು ಕೊಡುವವರಿಗೇನು ಕಡಿಮೆ? ನಾನು ಬೇಕಾದರೂ ಬರೆದು ಕೊಡುತ್ತೇನೆ- ಸದ್ರೀ ವಿದ್ಯಾರ್ಥಿಯು ಅತ್ಯಂತ ಬಡವನೂ ಬುದ್ಧಿವಂತನೂ ಇರುತ್ತಾನೆ ಎಂದು!

ಶೇಖರ ಚಕಾರ ಮಾತಾಡದೆ ನಿಂತ.



ಹೋಗಬಹುದು

ಇದೊಂದು ದಿನವಾದರೂ..

ಆಗುವದಿಲ್ಲ ಅಂದೆನಲ್ಲ

ಬಡವರ ಮಕ್ಕಳಿಗೆ ಕಲಿಯುವ ಅಧಿಕಾರವೇ ಇಲ್ಲವೆಂದು ನಿಮ್ಮ ಹೇಳಿಕೆಯೇ? ಎಂದು ಕೇಳಬೇಕೆಂದಿದ್ದ. ಆದರೆ ಮಾತಾಡದೆ ಹೋದ ದಾರಿಯಲ್ಲೇ ಮರಳಿದನು. ಕೊಠಡಿಯನ್ನು ಸೇರುವಾಗ ಅವನ ಹೊಟ್ಟೆಯು ಹಸಿವೆಯಿಂದ ಚುಂಯ್ಯಗುಟ್ಟಿತು; ತಲೆ ಕಾದು ಕೆಂಡವಾಯಿತು. ಎರಡೂ ಶಾಂತವಾಗಲೆಂದು ಅವನು ಒಂದು ಬ್ಯೂಡ್ಡ ನೀರು ಕುಡ

ನವೋದಯ ವಿದ್ಯಾಸಂಸ್ಥೆಯಲ್ಲಿ ಪ್ರೀನರ್ಸರಿ ಆರಂಭ

ಬಡವರ, ಕೂಲಿ ಕಾರ್ಮಿಕರ, ರೈತರ ಮಕ್ಕಳಿಗೆ ಉತ್ತಮ ಗುಣಮಟ್ಟದ ಶಿಕ್ಷಣ: ಸಿ.ಜಿ.ಮಂಜುನಾಥ್

• ಪ್ರಜೋದಯ ವರದಿ

ಚನ್ನರಾಯಪಟ್ಟಣ: ತಾಲ್ಲೂಕಿನ ಸ್ವಾತಂತ್ರ್ಯ ಪೂರ್ವ ಸಂಸ್ಥೆಯಾಗಿರುವ ನವೋದಯ ವಿದ್ಯಾಸಂಸ್ಥೆಯಲ್ಲಿ ಬಡವರ, ಕೂಲಿ ಕಾರ್ಮಿಕರ, ರೈತರ ಮಕ್ಕಳಿಗೆ ಉತ್ತಮ ಗುಣಮಟ್ಟದ ಶಿಕ್ಷಣ ದೊರಕಿಸುವ ನಿಟ್ಟಿನಲ್ಲಿ 2026–27ನೇ ಸಾಲಿನಿಂದ ಎಲ್ ಕೆಜಿ-ಯುಕೆಜಿ ತರಗತಿಗಳನ್ನು ಆರಂಭಿಸಲಾಗುತ್ತಿದೆ ಎಂದು ಸಂಸ್ಥೆಯ ಆಡಳಿತ ಮಂಡಳಿ ಅಧ್ಯಕ್ಷ ಸಿ.ಜೆ. ಮಂಜುನಾಥ್ ಹೇಳಿದರು.

2026–27ನೇ ಸಾಲಿನ ಶೈಕ್ಷಣೀಕ ವರ್ಷದ ದಾಖಾಲಾತಿ ಆರಂಭಕ್ಕೆ ಚಾಲನೆ ನೀಡಿ, ಮಾತನಾಡಿದ ಅವರು, ತಾಲ್ಲೂಕಿನ ಜನರಿಗೆ ಶಿಕ್ಷಣ ಒದಗಿಸುವ ನಿಟ್ಟಿನಲ್ಲಿ ಪಟ್ಟಣದ ಹೃದಯಭಾಗದಲ್ಲಿ ಆರಂಭಿಸಲಾಗಿರುವ ಸಂಸ್ಥೆಯೂ ಶತಮಾನೋತ್ಸವದ ಹಂಚಿನಲ್ಲಿದೆ. ಸಂಸ್ಥೆಯಿಂದ ಶಿಕ್ಷಣ ಕಲಿತ ಲಕ್ಷಾಂತರ ಮಂದಿ ದೇಶದ ವಿವಿಧ ಕ್ಷೇತ್ರಗಳಲ್ಲಿ ಅತ್ಯುನ್ನತ ಸೇವೆ ಸಲ್ಲಿಸಿದ್ದಾರೆ. ಅಂತರಾಷ್ಟ್ರೀಯ ಮಟ್ಟದಲ್ಲಿಯೂ ಗುರ್ತಿಸಿಕೊಂಡಿದ್ದಾರೆ. ಗ್ರಾಮೀಣ ಭಾಗದ ರೈತರ, ಬಡವರು, ಕೂಲಿ ಕಾರ್ಮೀಕರ ಮಕ್ಕಳು ಹೆಚ್ಚಿನ ಶುಲ್ಕ ಭರಿಸಿ ಖಾಸಗಿ ಶಾಲೆಗಳಿಂದ ಮತ್ತಷಟು ಬಡವರಾಗ ಬಾರದೆಂಬ ಉದ್ದೇಶದಿಂದ ನಮ್ಮ ಸಂಸ್ಥೆಯೂ ಅತ್ಯಂತ ಕನಿಷ್ಠ ಶುಲ್ಕಕ್ಕೆ ಉತ್ತಮ ಶಿಕ್ಷಣದೊಂದಿಗೆ ಅಗತ್ಯ ಮೂಲಭೂತ ಸೌಲಭ್ಯ ಕಲ್ಪಿಸಲಾಗಿದೆ ಎಂದು ತಿಳಿಸಿದರು.

ಸಂಸ್ಥೆಯಲ್ಲಿ ಉತ್ತಮ ನುರಿತ ಶಿಕ್ಷಕರು, ಉಪನ್ಯಾಸಕರ ತಂಡದೊಂದಿಗೆ ಸುಸಜ್ಜಿತ ಕೊಠಡಿ, ಪ್ರಯೋಗಾಲಯ, ವಿಶಾಲವಾದ ಆಟದ ಮೈದಾನ, ಪಿಯು ವಿದ್ಯಾರ್ಥಿಗಳಿಗೆ ನೀಟ್, ಸಿಇಟಿ ಕೋಚಿಂಗ್ ಮತ್ತು ಪೋಲೀಸ್, ಸೇನೆಗೆ ಸೇರಲು ವಿಶೇಷ ತರಬೇತಿ, ಉದ್ಯೋಗ ಮಾರ್ಗದರ್ಶಿ ಮೇಳ ಸೇರಿ ವಿದ್ಯಾರ್ಥಿಗಳ ಸಮಗ್ರ ಅಭಿವೃದ್ದೀಗಾಗಿ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ 13 ಜನರ ಆಡಳಿತ ಮಂಡಳಿ ಸರ್ವಸಿದ್ದವಾಗಿದೆ ಎಂದು ಅವರು ಮಾಹಿತಿ ನೀಡಿದರು.

ಸಂಸ್ಥೆಯ ಕಾರ್ಯದರ್ಶಿ ಶರತ್ ಕೆಂಬಾಳು ಮಾತನಾಡಿ, ಖಾಸಗಿ ಸಂಸ್ಥೆಗಳಿಂದ ಪೋಷಕರ ಜೇಬು ಬರಿದಾಗುತ್ತಿದೆ. ಮಕ್ಕಳಿಗೆ ಜ್ಞಾನ ತುಂಬುವಲ್ಲಿ ವಿಫಲವಾಗಿವೆ. ಶೇ.90 ರಷ್ಟು ಅಂಕಗಳಿಸಿರುವ ಮಕ್ಕಳಿಗಷ್ಟೆ ದಾಖಾಲಾತಿ ನೀಡುವ ಖಾಸಗಿ ಸಂಸ್ಥೆಗಳಿಂದ ಆ ಮಗುವಿನ ಬೆಳವಣಿಗೆ ಕೇವಲ ಎರಡ್ಮೂರು ಪರ್ಸೆಂಟ್‌ನಷ್ಟು ಹೆಚ್ಚಾಗಬಹುದು, ನಮ್ಮ ಸಂಸ್ಥೆಯಲ್ಲಿ ಶೇ.35, ಶೇ.40ರಷ್ಟು ಅಂಕಗಳಿಸಿರುವ ವಿದ್ಯಾರ್ಥಿಗಳನ್ನು ದಾಖಾಲು ಮಾಡಿಕೊಂಡು ಅವರನ್ನು ಶೇ.70 ಕ್ಕಿಂತಲ್ಲೂ ಹೆಚ್ಚು ಅಂಕಗಳಿಸುವ ಮಟ್ಟಿಗೆ ಶಿಕ್ಷಣ ಒದಗಿಸುತ್ತಿದ್ದೇವೆ. ಪ್ರಸಕ್ತ ವರ್ಷದಿಂದ ಎಲ್‌ಕೆಜಿ ಯುಕೆಜಿ ಆರಂಭಿಸುತ್ತಿದ್ದು, ಹಂತ ಹಂತವಾಗಿ 1ನೇ ತರಗತಿಯಿಂದ ಆರಂಭಗೊಂಡು ಇಂಗ್ಲೀಷ್ ಮೀಡಿಯಂ ಶಾಲೆ ಆರಂಭಿಸಲಾಗುವುದು ಎಂದರು.

ನಿರ್ದೇಶಕ ಆನಂದ್ ಕಾಳೇನಹಳ್ಳಿ ಮಾತನಾಡಿ, ಸಂಸ್ಥೆಯೂ ಕೆಲ ವರ್ಷಗಳ ಹಿಂದೆ ಕುಂಠಿತವಾಗಿದ್ದನ್ನು ಬಿಂಬಿಸಿ ಸಂಸ್ಥೆಯನ್ನು ಹಾಳು ಮಾಡುವ ಕೆಲಸ ಕೆಲವರಿಂದ ಆಗಿತ್ತು, ಇದೀಗ ನಮ್ಮ ನೂತನ ಮಂಡಳಿ ಸಂಸ್ಥೆಯ ಹಳೆಯ ಗತವೈಭವನ್ನು ಮರುಕಳಿಸುವ ನಿಟ್ಟಿನಲ್ಲಿ ಕೆಲಸ ಮಾಡುತ್ತಿದ್ದು, ಇದಕ್ಕೆ ಪೂರಕವಾಗಿ ಕಳೆದ ಬಾರಿ ದಾಖಲಾದ ಫಲಿತಾಂಶವೇ ಕಾರಣವಾಗಿದೆ. ಇದು ಮತ್ತಷ್ಟು ಎತ್ತರಕ್ಕೆ ಬೆಳೆಯಲು ತಾಲ್ಲೂಕಿನ ಜನತೆಯ ಸಹಕಾರ ಅಗತ್ಯ, ನಾವು ದುಡಿಯಲು ಸಿದ್ದರಿದ್ದು ನಮಗೆ ಬೆನ್ನುತಟ್ಟುವ ಕೆಲಸ ನಿಮ್ಮಿಂದಾಗಲಿ ಎಂದರು.

ಈ ವೇಳೆ ಆಡಳಿತ ಮಂಡಳಿಯ ಗೌರವಾಧ್ಯಕ್ಷ ಡಾ.ಶೇಷಶಯನ, ಕಾಲೇಜು ಪ್ರಾಂಶುಪಾಲ ಸಂಜಯ್ ಕುಮಾರ್, ಪ್ರೌಢಶಾಲೆ ಮುಖ್ಯ ಶಿಕ್ಷಕ ಎಸ್.ಸಿ.ಸುರೇಶ್ ಸೇರಿದಂತೆ ಸಂಸ್ಥೆಯ ಎಲ್ಲ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ, ಪೋಷಕರು ಹಾಜರಿದ್ದರು.

ಬಾಂಧವ್ಯ ಬೆಸೆಯಲು ಸಾಂಸ್ಕೃತಿಕ ಕಾರ್ಯಕ್ರಮ ಸಹಕಾರಿ

• ಪ್ರಜೋದಯ ವರದಿ

ಚನ್ನರಾಯಪಟ್ಟಣ: ದೇಶ ದೇಶಗಳ ನಡುವೆ ಪರಸ್ಪರ ಸ್ನೇಹ, ಸೌಹಾರ್ದತೆ ಬೆಳೆಸಲು ಸಾಂಸ್ಕೃತಿಕ ಕಾರ್ಯಕ್ರಮಗಳು ಸೇತುವೆಯಂತೆ ಕೆಲಸ ಮಾಡುತ್ತವೆ ಎಂದು ಶಾಸಕ ಸಿ.ಎನ್. ಬಾಲಕೃಷ್ಣ ಅವರು ಹೇಳಿದರು.

ಪಟ್ಟಣದ ಅಕ್ಷರ ಶಾಲೆಯಲ್ಲಿ ಶ್ರೀಲಂಕಾದ ಫ್ಯೂಚರ್ ಲೀಡರ್ ಸಂಸ್ಥೆಯ ಸಹಯೋಗದೊಂದಿಗೆ ನಡೆದ ವಸುದೈವ ಕುಟುಂಬಕಂ ಭಾರತ-ಶ್ರೀಲಂಕಾ ದೇಶಗಳ ವಿದ್ಯಾರ್ಥಿಗಳ ಸಾಂಸ್ಕೃತಿಕ ವಿನಿಮಯ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ವಿವಿಧತೆಯಲ್ಲಿ ಏಕತೆ ಮೂಡಿಸುವ ಸಾಂಸ್ಕೃತಿಕ ವೈಭವ ಭಾರತದ್ದಾಗಿದೆ ಎಂದರು.

ರಾಜ್ಯ ಕಾರ್ಯ ನಿರತ ಪತ್ರಕರ್ತರ ಸಂಘದ ಉಪಾಧ್ಯಕ್ಷ ಎಚ್.ಬಿ. ಮದನಗೌಡ ಅವರು ಮಾತನಾಡಿ, ಬೆಂಗಳೂರಿನ ನಗರದಲ್ಲಿ ಈ ಕಾರ್ಯಕ್ರಮ ಮಾಡುವ ನಿರೀಕ್ಷೆ ಇತ್ತು. ಅಕ್ಷರ ಶಾಲೆಯ ಆಡಳಿತ ಮಂಡಳಿಯವರ ಸಹಕಾರದಿಂದ ಚನ್ನರಾಯಪಟ್ಟಣದಲ್ಲಿ ಆಯೋಜಿಸಲಾಗಿದ್ದು, ಸಾರ್ವಜನಿಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಮುಂದಿನ ದಿನಗಳಲ್ಲಿ ಸ್ಥಳೀಯ ಕಲಾವಿದರಿಗೆ ಶ್ರೀ ಲಂಕಾದಲ್ಲಿ ಕಾರ್ಯಕ್ರಮ ನೀಡುವ ಅವಕಾಶ ಒದಗಿಬರಲಿದೆ ಎಂದು ತಿಳಿಸಿದರು.

ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಜೆ.ಆರ್.ಕೆಂಚೇಗೌಡ ಅವರು ಮಾತನಾಡಿ, ದೇಶಗಳ ನಡುವಿನ ಶ್ರೀಮಂತ ಸಂಸ್ಕೃತಿ, ಪರಂಪರೆಯನ್ನು ಇಂತಹ ಕಾರ್ಯಕ್ರಮಗಳು ತಿಳಿಸಿಕೊಡುತ್ತವೆ. ವಿಭಿನ್ನ ಸಂಸ್ಕೃತಿಯ ಪರಿಚಯವಾಗುತ್ತದೆ. ಶ್ರೀಲಂಕಾ ಕಲಾವಿದರು ಕರ್ನಾಟಕದಲ್ಲಿ ಪ್ರಥಮ ಬಾರಿಗೆ ಗ್ರಾಮೀಣ ಪ್ರದೇಶದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳ ಅನಾವರಣಗೊಳಿಸಿದ್ದಾರೆ. ಭಾರತ ಮತ್ತು ಸಿಂಹಳಿಯರ ಸಾಂಸ್ಕೃತಿಕ ವೈಭವದ ಸಮಾಗಮ ಇದಾಗಿದೆ ಎಂದು ಹೇಳಿದರು.

ಶ್ರೀಲಂಕಾದ ಕಲಾವಿದರು ಮತ್ತು ಅಕ್ಷರ ಶಾಲೆಯ ವಿದ್ಯಾರ್ಥಿಗಳು ಭರತನಾಟ್ಯ, ಯಕ್ಷಗಾನ ಹಾಗು ವಿವಿಧ ಸಾಂಸ್ಕೃತಿಕ ಪ್ರದರ್ಶನಗಳ ಮೂಲಕ ಭಾರತ-ಶ್ರೀಲಂಕಾ ನಡುವಿನ ಸ್ನೇಹ ಮತ್ತು ಸಾಂಸ್ಕೃತಿಕ ಸಂಬಂಧವನ್ನು ಬಿಂಬಿಸಿದ್ದಾರೆ ಎಂದರು.

ಅಕ್ಷರ ಶಾಲೆಯ ಅಧ್ಯಕ್ಷೆ ಪಿ. ಸರೋಜಾದೇವಿ, ಶ್ರೀಲಂಕಾ ಸಾಂಸ್ಕೃತಿಕ ಸಲಹೆಗಾರ ಉಪುಲ್ ಜನಕ ಜಯಸಿಂಘೆ, ಶ್ರೀಲಂಕಾದ ಫ್ಯೂಚರ್ ಲೀಡರ್ ಸಂಸ್ಥೆಯ ಅಧ್ಯಕ್ಷೆ ಪ್ರಿಯಾಂಗ ಬನರನಾಯಕ್, ಅಕ್ಷರ ಶಾಲೆಯ ಕಾರ್ಯದರ್ಶಿ ಎಂ.ಆರ್.ಅನಿಲ್ ಕುಮಾರ್, ಖಜಾಂಚಿ ಸಿ.ಸಿ. ಚೇತನ್, ನಿರ್ದೇಶಕ ತಿರುಮಲ ಪ್ರಸಾದ್, ಪ್ರಾಂಶುಪಾಲ ಸುನೀಲ್ ಪ್ಯಾಟ್ರಿಕ್ ಇದ್ದರು.

ಶ್ರೀಲಂಕಾ ತಂಡದ ಕೆಎಂಜಿ ಇಂಡಿಕನಿರೋಷನ್, ಶಾಂತಿ ಕುಮಾರಿ ಜಯನಿಧಿ, ಟಿ.ಬಿ.ಸುಶಾಂತ ಭಂಡಾರ ಸೇರಿ 17 ಕಲಾವಿದರು ಹಾಗು ಅಕ್ಷರ ಶಾಲೆಯ ವಿದ್ಯಾರ್ಥಿಗಳು ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿಕೊಟ್ಟರು.

ಹಲ್ಲೆ ಖಂಡಿಸಿ ಪ್ರತಿಭಟನೆ

» ಮೊದಲನೇ ಪುಟದಿಂದ

ರಾಜಿ ಮಾಡಿಸಲು ಕಸರತ್ತು ಮಾಡಿದೆ. ಇಂತಹ ವಿಷಯ ಲಂಪಟರನ್ನು ಕೂಡಲೇ ಬೇರೆಡೆಗೆ ವರ್ಗಾವಣೆ ಮಾಡಬೇಕು. ಹಲ್ಲೆ ಮಾಡಿದ ಗೂಂಡಾಗಳ ವಿರುದ್ಧ ರೌಡಿ ಶೀಟ್ ತೆರೆದು ಗಡಿಪಾರು ಮಾಡಬೇಕೆಂದು ಆಗ್ರಹಿಸಿದರು.

ವಕೀಲ ವಿವೇಕ್ ಅವರು ಮಾತನಾಡಿ, ಪೊಲೀಸರು ಪ್ರಕರಣ ದಾಖಲಿಸಲು ಹಿಂದೇಟು ಹಾಕಿದರೆ ಹೈಕೋರ್ಟ್‌ನಲ್ಲಿ ಮೊಕದ್ದಮೆ ದಾಖಲಿಸಿ ಕಾನೂನು ಹೋರಾಟ ಮಾಡಲು ಹಿಂದೇಟು ಹಾಕುವುದಿಲ್ಲ ಎಂದು ಎಚ್ಚರಿಕೆ ನೀಡಿದರು.

ಹಿಂದೂಪರ ಸಂಘಟನೆಗಳ ಮುಖಂಡರಾದ ಕೃಷ್ಣ, ಶಿವಶಂಕರ್, ಅರುಣ್ ಕುಮಾರ್ ಇನ್ನಿತರರು ಮಾತನಾಡಿದರು. ನಗರಸಭೆ ಮಾಜಿ ಅಧ್ಯಕ್ಷ ಸಿ.ಗಿರೀಶ್, ಮಾಜಿ ಸದಸ್ಯರಾದ ಹರ್ಷವರ್ಧನ್ ರಾಜ್, ರಮೇಶ್ ನಾಯ್ಡು, ಶಿವನ್‌ರಾಜ್, ವಾಸು, ಶಿವರಾಜ್, ಉಮೇಶ್ ಭೋವಿ, ಸಿದ್ದೇಶ್, ಸಿಂಧೂ ಸೇರಿ ಇತರರಿದ್ದರು.

ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸುವುದಾಗಿ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಎಂ.ಕೆ. ತಮ್ಮಯ್ಯ ಭರವಸೆ ನೀಡಿದ ಬಳಿಕ ಹೋರಾಟ ಹಿಂಪಡೆಯಲಾಯಿತು. ಡಿವೈಎಸ್ಪಿ ಬಿ.ಆರ್.ಗೋಪಿ, ಸಿಪಿಐ ಅರುಣ್ ಕುಮಾರ್, ನಗರಠಾಣೆ ಇನ್ಸ್‌ಪೆಕ್ಟರ್ ಕೃಷ್ಣ ಕುಮಾರ್, ಪಿಎಸ್‌ಐ ದಿಲೀಪ್ ಕುಮಾರ್ ಬಿಗಿ ಬಂದೋಬಸ್ತ್ ಕೈಗೊಂಡಿದ್ದರು.

ಕೆಪಿಎಸ್ ಮ್ಯಾಗ್ನೆಟ್ ಯೋಜನೆ ವಿರುದ್ಧ ಜನ ಸಮಾವೇಶ

• ಪ್ರಜೋದಯ ವರದಿ

ಹಾಸನ: ಕೆಪಿಎಸ್ ಮ್ಯಾಗ್ನೆಟ್ ಯೋಜನೆ ವಿರುದ್ಧ ಏ.10ರಂದು ಬೆಂಗಳೂರಿನ ಫ್ರೀಡಂಪಾರ್ಕ್ ನಲ್ಲಿ ನಡೆಯಲಿರುವ ರಾಜ್ಯಮಟ್ಟದ ಜನ ಸಮಾವೇಶ ಹಿನ್ನಲೆ ಶನಿವಾರ ನಗರದ ಹೇಮಾವತಿ ಪ್ರತಿಮೆ ಬಳಿ ಪೋಸ್ಟರ್ ಬಿಡುಗಡೆ ಮಾಡಲಾಯಿತು.

ಈ ವೇಳೆ ಎಐಡಿಎಸ್‌ಓ ಜಿಲ್ಲಾಧ್ಯಕ್ಷೆ ಚೈತ್ರ ಅವರು ಮಾತನಾಡಿ, ಕೆಪಿಎಸ್ ಮ್ಯಾಗ್ನೆಟ್ ಯೋಜನೆ ಹೆಸರಲ್ಲಿ 40,000 ಸರ್ಕಾರಿ ಶಾಲೆಗಳನ್ನು ಮುಚ್ಚುತ್ತಿರುವುದರ ವಿರುದ್ಧ ಕಳೆದ 4 ತಿಂಗಳಿನಿಂದ ಜನ ಹೋರಾಟ ನಡೆದಿದೆ. ಎಐಡಿಎಸ್‌ಓ ನೇತೃತ್ವದಲ್ಲಿ ರಾಜ್ಯಾದ್ಯಂತ ಹಳ್ಳಿ- ಹಳ್ಳಿಗಳಲ್ಲಿ ಪೋಷಕರು ಹಾಗು ಗ್ರಾಮಸ್ಥರು ಸಾರ್ವಜನಿಕ ಶಿಕ್ಷಣ ಉಳಿಸಿ ಹೋರಾಟ ಸಮಿತಿಗಳನ್ನು ರಚಿಸಿಕೊಂಡು ನಮ್ಮೂರ ಶಾಲೆ ಮುಚ್ಚಲು ಬಿಡುವುದಿಲ್ಲ ಎಂದು ಒಕ್ಕೊರಲಿನಿಂದ ಧ್ವನಿಯೆತ್ತಿದ್ದಾರೆ. ನಾಡಿನ ಹೆಸರಾಂತ ಸಾಹಿತಿಗಳು, ಶಿಕ್ಷಣ ತಜ್ಞರು ಹಾಗು ಶಿಕ್ಷಣ ಪ್ರೇಮಿಗಳು ಬಡಮಕ್ಕಳನ್ನು ಶಿಕ್ಷಣದಿಂದ ಶಾಶ್ವತವಾಗಿ ದೂರ ತಳ್ಳುವ ರಾಜ್ಯ ಕಾಂಗ್ರೆಸ್ ಸರ್ಕಾರದ ನಿರ್ಧಾರವನ್ನು ಖಂಡಿಸಿದ್ದಾರೆಂದು ಹೇಳಿದರು.

ಜನತೆಯ ತೀವ್ರ ವಿರೋಧದ ನಡುವೆಯೂ ಸರ್ಕಾರ ಶಾಲೆಗಳನ್ನು ಮುಚ್ಚುವ ಕೆಲಸವನ್ನು ಮುಂದುವರಿಸಿದೆ. ಸರ್ಕಾರ ಈಗಾಗಲೇ ಯಾವ-ಯಾವ ಶಾಲೆಗಳನ್ನು ವಿಲೀನಗೊಳಿಸಬೇಕೆಂದು ಮ್ಯಾಪಿಂಗ್ ನಡೆಸಿದೆ. ಅಧಿಕಾರಿಗಳಿಂದ ಮ್ಯಾಗ್ನೆಟ್ ಶಾಲೆಯ ಸಮೀಕ್ಷೆ ಮಾಡಿಸಲಾಗುತ್ತಿದೆ. ವಿಲೀನಗೊಳ್ಳುವ ಶಾಲೆಗಳ ಮುಖ್ಯಶಿಕ್ಷಕರಿಗೆ ಮೌಖಿಕವಾಗಿ ಆದೇಶ ನೀಡಲಾಗಿದೆ. ಮುಂದಿನ ಶೈಕ್ಷಣಿಕ ವರ್ಷದಲ್ಲಿ ತಮ್ಮ ಮಕ್ಕಳನ್ನು ಕೆಪಿಎಸ್ ಶಾಲೆಗೆ ಕಳುಹಿಸುವಂತೆ ಒತ್ತಾಯಿಸಲು ಶಾಲೆಗಳಿಗೆ ನೋಟೀಸ್ ನೀಡಲಾಗಿದೆ. ಈ ಯೋಜನೆಯನ್ನು ಶತಾಯಗತಾಯ ಅನುಷ್ಠಾನಗೊಳಿಸಲು ಏಪ್ರಿಲ್ ಒಂದರಂದು ಜಿಲ್ಲೆಯ ಡಿಡಿಪಿಐ ಹಾಗೂ ಬಿಇಓಗಳ ಸಭೆ ನಡೆಸಿ ಶಾಲೆ ಮುಚ್ಚಲು ಕುತಂತ್ರ ನಡೆಸಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸರ್ಕಾರದ ಈ ಕರಡು ಜನ ವಿರೋಧಿ ಮತ್ತು ನಿರಂಕುಶ ನಡೆಯ ವಿರುದ್ಧ ಹೋರಾಟ ತೀವ್ರಗೊಳಿಸಲು ಎಐಡಿಎಸ್‌ಓ ಹಾಗು ಸಾರ್ವಜನಿಕ ಶಿಕ್ಷಣ ಉಳಿಸಿ ಸಮಿತಿ ನಿರ್ಧರಿಸಿದೆ ಎಂದು ಹೇಳಿದರು. ಪೋಸ್ಟರ್ ಬಿಡುಗಡೆ ಕಾರ್ಯಕ್ರಮದಲ್ಲಿ ಸುಷ್ಮಾ, ಸ್ಫೂರ್ತಿ, ವರ್ಷ, ಅಕ್ಷತಾ, ಅಂಕಿತ, ಪೂಜಾ ಇತರರಿದ್ದರು.

ಹೆಚ್.ಡಿ.ಕೆ. ಕೇಂದ್ರ ಸಚಿವರಾಗಿರುವುದು ಅದೃಷ್ಟ

• ಪ್ರಜೋದಯ ವರದಿ

ಬೆಂಗಳೂರು: ಹೆಚ್.ಡಿ.ಕುಮಾರಸ್ವಾಮಿ ಅವರು ಕೇಂದ್ರದ ಉಕ್ಕು ಹಾಗು ಬೃಹತ್ ಕೈಗಾರಿಕೆ ಸಚಿವರಾಗಿರುವುದು ದಕ್ಷಿಣ ಭಾರತದ ಅದೃಷ್ಟ ಎಂದು ಆಂಧ್ರಪ್ರದೇಶದ ಐಟಿ ಸಚಿವ ನಾರಾ ಲೋಕೇಶ್ ಅವರು ಹೇಳಿದರು.

ರಾಯಚೂರು ಜಿಲ್ಲೆಯ ಸಿಂಧನೂರಿನಲ್ಲಿನಡೆದಕಾರ್ಯಕ್ರಮವೊಂದರಲ್ಲಿ ಅವರು ಮಾತನಾಡಿ, ಆಂಧ್ರ ಪ್ರದೇಶದ ವಿಶಾಖಪಟ್ಟಣ ಉಕ್ಕು ಕಾರ್ಖಾನೆಯನ್ನು ಮುಚ್ಚುವ ಪರಿಸ್ಥಿತಿ ಎದುರಾಗಿತ್ತು. ಆದರೆ, ಕುಮಾರಸ್ವಾಮಿ ಅವರು ಮಾತನಾಡಿ, ನಾನು ನಿಮ್ಮೊಂದಿಗಿದ್ದೇನೆ. ವಿಶಾಖಪಟ್ಟಣದ ಉಕ್ಕು ಕಾರ್ಖಾನೆಯನ್ನು ಖಾಸಗೀಕರಣವಾಗುವುದಕ್ಕೆ ಬಿಡುವುದಿಲ್ಲ ಎಂದು ಮಾತುಕೊಟ್ಟಿದ್ದರು. ಆದರಂತೆಯೇ ನಡೆದುಕೊಂಡಿದ್ದಾರೆಂದು ಲೋಕೇಶ್ ತಿಳಿಸಿದ್ದಾರೆ.

ವಿಶಾಖಪಟ್ಟಣ ಉಕ್ಕು ಕಾರ್ಖಾನೆ ಮಾತ್ರವಲ್ಲ, ಅನಕಪಲ್ಲಿಯಲ್ಲಿ ದೇಶದ ಅತಿದೊಡ್ಡ ಗ್ರೀನ್ ಪ್ಲ್ಯಾಂಟ್ ಸ್ಥಾಪನೆ ಮಾಡಲಾಗುತ್ತಿದೆ. ಅದಕ್ಕೆ ಕುಮಾರಸ್ವಾಮಿ ಅವರೇ ಕಾರಣ ಎಂದರೇ ತಪ್ಪಲ್ಲ, ಅದಕ್ಕಾಗಿ ನಾವೆಲ್ಲ ಅವರ ಋಣದಲ್ಲಿದ್ದೇವೆ ಎಂದಿದ್ದಾರೆ. ಕರ್ನಾಟಕದ ಭೂಮಿ ಪ್ರವಿತ್ರವಾದದ್ದು. ಇಲ್ಲಿಯ ಸಂಸ್ಕೃತಿ, ಪರಂಪರೆ ದೊಡ್ಡದು. ನಮ್ಮ ಮಕ್ಕಳು ಡಾಕ್ಟರ್, ಇಂಜಿನೀಯರ್ ಆಗಬೇಕೆಂದು ಆಸೆ ಪಡುವ ತಂದೆ-ತಾಯಿಯಂದಿರು ನಮ್ಮ ಮಗು ಸೈನಿಕನಾಗಬೇಕೆಂದು ಏಕೆ ಆಸೆ ಪಡುತ್ತಿಲ್ಲ. ನಾವು ಇಲ್ಲಿ ನೆಮ್ಮದಿಯಿಂದ ಇದ್ದೇವೆಂದರೆ ಅದಕ್ಕೆ ಗಡಿಯಲ್ಲಿ ದೇಶ ರಕ್ಷಣೆ ಮಾಡುತ್ತಿರುವ ಸೈನಿಕರೇ ಕಾರಣ. ದೇಶ ರಕ್ಷಣೆ ಕಾರ್ಯಕ್ಕಿಂತ ದೊಡ್ಡ ಸೌಭಾಗ್ಯ ಮತ್ತೊಂದಿಲ್ಲ ಎಂದು ಲೋಕೇಶ್ ವಿಂಚು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರು ಮಾತನಾಡಿ, ತುಂಗಭದ್ರಾ ಜಲಾಶಯದಲ್ಲಿ 30 ಟಿಎಂಸಿ ಹೂಳು ತುಂಬಿದೆ. ಅದಕ್ಕೆ ಪರ್ಯಾಯವಾಗಿ ನವಲಿ ಬಳಿ ಜಲಾಶಯ ನಿರ್ಮಿಸುವ ಕುರಿತು ಕರ್ನಾಟಕ, ಆಂಧ್ರಪ್ರದೇಶ ಮತ್ತು ತೆಲಂಗಾಣ ರಾಜ್ಯಗಳು ಸೌಹಾರ್ದಯುತವಾಗಿ ಚರ್ಚೆ ನಡೆಸಿ ಸೂಕ್ತ ತೀರ್ಮಾನ ಕೈಗೊಳ್ಳುವ ಮೂಲಕ ಪರಿಹಾರ ಕಂಡುಕೊಳ್ಳಬೇಕಾಗಿದೆ ಎಂದಿದ್ದಾರೆ.

ನಾರಾ ಲೋಕೇಶ್ ಸಚಿವರಾಗಿ ಉತ್ತಮ ಆಡಳಿತ ನಡೆಸಿ ಪ್ರಬುದ್ಧ ರಾಜಕಾರಣಿಯಾಗಿ ಬೆಳೆಯುತ್ತಿದ್ದಾರೆ. ಅವರು ನವಲಿ ಜಲಾಶಯದ ಬಗ್ಗೆ ಹೇಳಿಕೆ ನೀಡಿ ಗೊಂದಲ ಸೃಷ್ಟಿಸಿಕೊಳ್ಳು ವುದು ಬೇಡ. ಇದು ಮೂರು ರಾಜ್ಯಗಳ ವಿಚಾರವಾಗಿದ್ದು ಹೊಂದಾಣಿಕೆಯಿಂದ ನಿರ್ಧಾರವಾಗಲಿ ಎಂದು ತಿಳಿಸಿದ್ದಾರೆ.

ರಕ್ಷಣಾ ಸಚಿವ ರಾಜನಾಥಸಿಂಗ್ ಅವರ ಮೇಲೆ ಒತ್ತಡ ಹಾಕಿ ಸಿಂಧನೂರಿನ ಶ್ರೀಕೃಷ್ಣದೇವರಾಯ ವಿದ್ಯಾ ಸಂಸ್ಥೆಗೆ ಸೈನಿಕ ಶಾಲೆ ಮಂಜೂರು ಮಾಡಿಸಲಾಗಿದೆ. ಅದರಲ್ಲಿ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ದೊರೆಯುತ್ತದೆ. ಅದರ ಸದುಪಯೋಗ ಎಲ್ಲರೂ ಪಡೆಯಬೇಕೆಂದು ಹೇಳಿದ್ದಾರೆ.

ಈಚೆಗೆ ಭದ್ರಾವತಿಯಲ್ಲಿ ಮಾತನಾಡಿದ್ದ ಕುಮಾರಸ್ವಾಮಿ, ಪ್ರಧಾನಿ ನರೇಂದ್ರ ಮೋದಿ ಹಾಗು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರನ್ನು ಒಪ್ಪಿಸಿ ವಿಶಾಖಪಟ್ಟಣ ಉಕ್ಕಿನ ಕಾರ್ಖಾನೆಯ 35,000 ಕೋಟಿ ರೂ. ಸಾಲ ತೀರಿಸಿ ಪುನರ್ ಆರಂಭಿದ್ದೇನೆ. ಈಗ ಅಲ್ಲಿ ನಿತ್ಯ 21 ಟನ್ ಉಕ್ಕು ಉತ್ಪಾದನೆ ಆಗುತ್ತಿದೆ ಎಂದಿದ್ದರು.

ಅಭಿವ್ಯಕ್ತಿ ಸ್ವಾತಂತ್ರ್ಯ ದುರುಪಯೋಗ ಆಗಬಾರದು

» ಮೊದಲನೇ ಪುಟದಿಂದ

ರಹಸ್ಯ ಕಾರ್ಯಾಚರಣೆ ಮೂಲಕ ಅಕ್ರಮ, ಕಾನೂನು ಬಾಹಿರ ಚಟುವಟಿಕೆ ಬಯಲಿಗೆ ಎಳೆಯಬಹುದು. ಸರಿಯಾದ ಮಾಹಿತಿ ಆಧರಿಸಿ ನಡೆದರೆ ಸಮಾಜದ ಬದಲಾವಣೆಗೆ, ಸರ್ಕಾರ ಹಾಗು ಸಂಬಂಧಪಟ್ಟವರನ್ನು ಎಚ್ಚರಿ ಸಲು ಸಹಕಾರಿ ಆಗುತ್ತದೆ. ಪತ್ರಕರ್ತರಿಗೆ ಸಾರ್ವಜನಿಕ ಹಿತಾಸಕ್ತಿ ಕಾಪಾಡುವ, ಸರ್ಕಾರವನ್ನು ತಿದ್ದುವ ಗುರುತರ ಜವಾಬ್ದಾರಿ ಇದೆ. ಅದಕ್ಕೆ ಪೂರಕವಾಗಿ ಈಗಿನ ಅತ್ಯಾಧುನಿಕ ತಂತ್ರಜ್ಞಾನ ಬಳಸಿಕೊಂಡು ಮುನ್ನಡೆಯಬೇಕು. ಇತ್ತೀಚಿನ ದಿನಗಳಲ್ಲಿ ಪತ್ರಕರ್ತರು, ವಕೀಲರು ಸೇರಿ ಅನೇಕರು ಅಧ್ಯಯನ ಮಾಡುವುದಿಲ್ಲ, ಹೀಗಾಗಿ ವಾಸ್ತವಿಕ ಅರಿವು ಕಡಿಮೆಯಾಗಿದೆ ಎಂಬ ಅಭಿಪ್ರಾಯ ಸಾರ್ವಜನಿಕ ವಲಯದಲ್ಲಿ ಕೇಳಿಬರುತ್ತಿದೆ ಎಂದು ಹೇಳಿದರು.

ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯ ಉಪಾಧ್ಯಕ್ಷ ಹೆಚ್.ಬಿ.ಮದನ ಗೌಡ ಅವರು ಮಾತನಾಡಿ, ಪತ್ರಕರ್ತರ ಅರಿವಿನ ಮಟ್ಟ ಹೆಚ್ಚಿಸುವ ಇಂತಹ ಕಾರ್ಯಕ್ರಮ ರಾಜ್ಯದ ಯಾವ ಜಿಲ್ಲೆಯಲ್ಲೂ ನಡೆಯುತ್ತಿಲ್ಲ. ಇದೊಂದು ಮಾದರಿ ಕಾರ್ಯಕ್ರಮವಾಗಿದೆ ಎಂದರು.

ಸಂಘದ ಜಿಲ್ಲಾಧ್ಯಕ್ಷ ಜೆ.ಆರ್.ಕೆಂಚೇಗೌಡ ಅವರು ಮಾತನಾಡಿ, ವಕೀಲರು, ಪತ್ರಕರ್ತರು ಸಮಾಜದಲ್ಲಿ ಬಹುಮುಖ್ಯ ಪಾತ್ರ ವಹಿಸುವುದರಿಂದ ನಿರಂತರ ಅಧ್ಯಯನದಲ್ಲಿ ತೊಡಗ ಬೇಕು. ಇತ್ತೀಚಿನ ದಿನಗಳಲ್ಲಿ ಪ್ರಬುದ್ಧರ ಕೊರತೆ ಕಾಡುತ್ತಿದೆ. ಈಗಿನ ವಿದ್ಯಾರ್ಥಿಗಳು ಕಾನೂನು ಬಗ್ಗೆ ತಿಳಿವಳಿಕೆ ಹೊಂದಬೇಕೆಂದು ಸಲಹೆ ನೀಡಿದರು.

ಪತ್ರಿಕೋದ್ಯಮದಲ್ಲಿ ನಡೆದ ಅನೇಕ ಮಾನಹಾನಿ ಪ್ರಕರಣಗಳ ಕುರಿತು ವಕೀಲ ಸೂರ್ಯ ಮುಕುಂದ್‌ರಾಜ್ ಮಾಹಿತಿ ನೀಡಿದ್ದಾರೆ. ಮಾನನಷ್ಟ ಮೊಕದ್ದಮೆಯಿಂದ ಜೈಲುವಾಸ ಅನುಭವಿಸಿದ ಪ್ರಕರಣಗಳು ಸಾಕಷ್ಟಿವೆ ಎಂದು ವಿವರಿಸಿದರು.

ಪ್ರಶಸ್ತಿ ಪುರಸ್ಕೃತರಿಗೆ ಸನ್ಮಾನ

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ 2024ನೇ ಸಾಲಿನ ಅಭಿವೃದ್ಧಿ, ಸಾಮಾಜಿಕ ಮಾನವೀಯ ವರದಿ ವಿಭಾಗದ ಪ್ರಶಸ್ತಿಗೆ ಭಾಜನರಾಗಿರುವ ದೂರದರ್ಶನ ವಾಹಿನಿಯ ಹಿರಿಯ ವರದಿಗಾರ ಮೋಹನ್ ಕೃಷ್ಣ, ರೈತರ ಬದುಕು ಬವಣೆ ವರದಿಗೆ ತಗಡೂರು ಕಮಲಮ್ಮ-ವೀರೇಗೌಡ ಪ್ರಶಸ್ತಿ ಪಡೆದಿರುವ ಚನ್ನರಾಯಪಟ್ಟಣದ ಪತ್ರಕರ್ತ ಜಯರಾಮ್ ಹಾಗು ರಾಯಚೂರು ಜಿಲ್ಲೆ ಲಿಂಗಸುಗೂರು ಸಿದ್ದರಾಮಪ್ಪ ಕೆಂಭಾವಿ ಹೆಸರಿನಲ್ಲಿ ಅವರ ಪುತ್ರ ಸ್ಥಾಪಿಸಿರುವ ಪ್ರಶಸ್ತಿಗೆ ಭಾಜನರಾಗಿರುವ ಬೇಲೂರು ತಾಲ್ಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಮಾಜಿ ಅಧ್ಯಕ್ಷೆ ಭಾರತಿಗೌಡ ಅವರನ್ನು ಜಿಲ್ಲಾ ಪತ್ರಕರ್ತರ ಸಂಘದಿಂದ ಸನ್ಮಾನಿಸಲಾಯಿತು.

ಸಂಘದ ಕಾರ್ಯದರ್ಶಿ ಕೆ.ಎಂ.ಹರೀಶ್ ಸ್ವಾಗತಿಸಿ, ನಿರೂಪಿಸಿದರು. ಪ್ರಧಾನ ಕಾರ್ಯದರ್ಶಿ ಕೆ.ಜಿ.ಸುರೇಶ್ ಪ್ರಾಸ್ತಾವಿಕ ಮಾತುಗಳನ್ನಾಡಿದರು. ವಕೀಲ ಸೂರ್ಯ ಮುಕುಂದರಾಜ್ ಅವರನ್ನು ಸಂಘದಿಂದ ಅಭಿನಂದಿಸ ಲಾಯಿತು.

ಮಾಜಿ ಅಧ್ಯಕ್ಷ ಬಾಳ್ಳುಗೋಪಾಲ್, ಸಾಂಸ್ಕೃತಿಕ ಸಮಿತಿ ಸಂಚಾಲಕ ಚಲಂ ಹಾಡ್ಲಹಳ್ಳಿ, ಹಿಂದೂ ಪ್ರಕಾಶ್, ಮಲ್ಲಿಕಾರ್ಜುನ ಕೊಚ್ಚರಗಿ, ಚೈತ್ರಾ ಮಹಾಲಿಂಗು ಇತರರಿದ್ದರು.

ಜಿಲ್ಲಾದ್ಯಂತ 4,271 ಗಣತಿ ಬ್ಲಾಕ್ ರಚನೆ

» ಮೊದಲನೇ ಪುಟದಿಂದ

ಯೋಜನೆಗಳ ರೂಪಿಸುವ ಕಾರಣಕ್ಕೆ ಮಾತ್ರ ಬಳಸಲಾಗುತ್ತದೆ ಮತ್ತು ಯಾವುದೇ ವ್ಯಕ್ತಿಗತ ಉದ್ದೇಶಗಳಿಗೆ ಬಳಸುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ದೇಶದ ಆಡಳಿತ ವ್ಯವಸ್ಥೆಯಲ್ಲಿ ಅತ್ಯಂತ ಮಹತ್ವ ಮತ್ತು ಮೂಲಭೂತ ಚಟುವಟಿಕೆಗಳಲ್ಲಿ ಒಂದಾದ ಜನಗಣತಿಯಲ್ಲಿ ಜನಸಂಖ್ಯೆ, ಜನರ ಜೀವನಮಟ್ಟ, ವಾಸಸ್ಥಿತಿ, ಶಿಕ್ಷಣ, ಉದ್ಯೋಗ ಸೇರಿ ಹಲವು ಪ್ರಮುಖ ಅಂಶಗಳ ಬಗ್ಗೆ ನಿಖರ ಮಾಹಿತಿ ಒದಗಿಸುವ ಕಾರ್ಯ ಇದು. ಸರ್ಕಾರದ ಅಭಿವೃದ್ಧಿ ಯೋಜನೆಗಳಿಗೆ ದಿಕ್ಕು ತೋರಿಸುವ ಪ್ರಮುಖ ಆಧಾರವಾಗಿದೆ ಎಂದು ಹೇಳಿದರು. ಅಪರ ಜಿಲ್ಲಾಧಿಕಾರಿ ಜಗದೀಶ್ ವಿ. ಗಂಗಣ್ಣನವರ್ ಹಾಜರರಿದ್ದರು.

ಏ.7ರಿಂದ 3 ದಿನ ವಿದ್ಯುತ್ ವ್ಯತ್ಯಯ

ಮಾಡಾಳು: ಅರಸೀಕೆರೆ ತಾಲ್ಲೂಕು ಸೆಸ್ಕಾಂ ಬಾಣಾವರ ಉಪವಿಭಾಗದ ದೊಡ್ಡಮೇಟಿಕುರ್ಕೆ ಗ್ರಾಮದ ಮುಖ್ಯ ರಸ್ತೆಯಲ್ಲಿರುವ ವಿದ್ಯುತ್ ಕಂಬ ಹಾಗು ತಂತಿ ಸ್ಥಳಾಂತರಿಸುವ ಕಾಮಗಾರಿ ಕೈಗೊಂಡಿರುವ ಹಿನ್ನಲೆಯಲ್ಲಿ ಏ.7 ರಿಂದ 9ರ ವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ಮೂರು ದಿನ ಬೆಳಿಗ್ಗೆ 11 ರಿಂದ ಸಂಜೆ 6ರ ವರೆಗೆ ದೊಡ್ಡಮೇಟಿಕುರ್ಕೆ, ಕೆ.ಶಂಕರನಹಳ್ಳಿ, ಮಾಡಾಳು, ರಾಂಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಎಲ್ಲಾ ಗ್ರಾಮಗಳಿಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ಕಲ್ಲು ಗಣಿಗಾರಿಕೆ ಅನುಮತಿಗೆ ಅನಿರ್ಧಿಷ್ಟಾವಧಿ ಧರಣಿ

ಇಬ್ಬರು ಪ್ರತಿಭಟನಾಕಾರರು ಅಸ್ವಸ್ಥ, ಆಸ್ಪತ್ರೆಗೆ ದಾಖಲು

• ಪ್ರಜೋದಯ ವರದಿ

ಹಾಸನ: ಭೋವಿ ಜನಾಂಗದ ಪಾರಂಪರಿಕ ಕಲ್ಲು ಒಡೆಯುವ ಕೆಲಸಕ್ಕೆ ಅಡ್ಡಿಪಡಿಸುತ್ತಿರುವವರ ವಿರುದ್ಧ ಕ್ರಮ ಕೈಗೊಂಡು, ಗಣಿಗಾರಿಕೆ ಮುಂದುವರಿಸಲು ಅನುಮತಿ ನೀಡಬೇಕೆಂದು ಒತ್ತಾಯಿಸಿ ಆಲೂರು ತಾಲ್ಲೂಕು ಕಾರಗೋಡು ಭೋವಿ ಸಂಘದ ಸದಸ್ಯರು ನಡೆಸುತ್ತಿರುವ ಅನಿರ್ಧಿಷ್ಟಾವಧಿ ಧರಣಿ ನಾಲ್ಕನೇ ದಿನವೂ ಮುಂದುವರೆದಿದೆ.

ಜಿಲ್ಲಾಧಿಕಾರಿ ಕಚೇರಿ ಎದುರು ನಡೆಯುತ್ತಿರುವ ಪ್ರತಿಭಟನೆಯಲ್ಲಿ ಭಾಗವಹಿಸಿದ್ದ ಇಬ್ಬರು ಅಸ್ವಸ್ಥಗೊಂಡಿದ್ದರಿಂದ ಕೂಡಲೇ ಅವರನ್ನು ಆಸ್ಪತ್ರೆಗೆ ದಾಖಲಿಸಲಾಯಿತು.

ಆಲೂರು ತಾಲ್ಲೂಕು ಕಾರಗೋಡು ಗ್ರಾಮದ ಜಯಂತಿ ನಗರದಲ್ಲಿ ಆರ್ಥಿಕ, ಸಾಮಾಜಿಕ, ಶೈಕ್ಷಣಿಕವಾಗಿ ಹಿಂದುಳಿದಿರುವ ಸುಮಾರು 250–300 ಜನರು ಸ್ವಾವಲಂಬಿ ಜೀವ ನಡೆಸಲು ಸರ್ವೆ ನ.151ರ 3 ಎಕರೆ ಸರ್ಕಾರಿ ಗೋಮಾಳದಲ್ಲಿ ಕಲ್ಲು, ಸೈಜುಗಲ್ಲು ಗಣಿಗಾರಿಕೆ ಮಾಡುತ್ತಿದ್ದೇವು. ನಾವು ಯಾವುದೇ ಸ್ಪೋಟ ಮಾಡದೆ ಮಾನವ ಶ್ರಮದಿಂದ ಸುತ್ತಿಗೆ, ಉಳಿ, ಚಮಟಿಗೆ ಬಳಸಿ ಸೈಜುಗಲ್ಲು ಒಡೆದುಕೊಂಡು ಜೀವನ ಸಾಗಿಸುತ್ತಿದ್ದೇವೆ. ನಮಗೆ ಸ್ವಂತ ಭೂಮಿ ಇಲ್ಲ. ಹೊಸಮಠ ಗ್ರಾಮದ ಸವರ್ಣೀಯರು ಸುಳ್ಳು ಕಾರಣ ನೀಡಿ ಅಡ್ಡಿಪಡಿಸುತ್ತಿದ್ದಾರೆ. ಇತ್ತೀಚೆಗೆ ಕೆಲ ಸಂಘಟನೆಗಳ ಪ್ರತಿಭಟನೆ ಹಿನ್ನಲೆ ಜಿಲ್ಲಾಡಳಿತ ತಾತ್ಕಾಲಿಕವಾಗಿ ಕ್ವಾರಿಯನ್ನು ಸ್ಥಗಿತಗೊಳಿಸಿರುವುದರಿಂದ ನಮ್ಮ ಜೀವನಕ್ಕೆ ತೊಂದರೆಯಾಗಿದೆ ಎಂದು ಅಳಲು ತೋಡಿಕೊಂಡರು.

ನಾವು ಕಲ್ಲು ಗಣಿಗಾರಿಕೆಯಿಂದ ಯಾರಿಗೂ ತೊಂದರೆ ನೀಡುತ್ತಿಲ್ಲ, ಹಾಗಾಗಿ ಸಂಬಂಧ ಪಟ್ಟವರು ಪರಿಶೀಲನೆ ನಡೆಸಿ ಕಲ್ಲುಗಣಿಗಾರಿಕೆ ಪುನರಾರಂಭಕ್ಕೆ ಅನುಮತಿ ನೀಡಬೇಕೆಂದು ಮನವಿ ಮಾಡಿದರು.

ಕಲ್ಲು ಗಣಿಗಾರಿಕೆಗೆ ಅನುಮತಿ ನೀಡುವವರೆಗೂ ನಮ್ಮ ಪ್ರಾಣ ಹೋದರೂ ಸರಿ ಹೋರಾಟ ದಿಂದ ಹಿಂದೆ ಸರಿಯುವುದಿಲ್ಲ ಎಂದು ಎಚ್ಚರಿಕೆ ನೀಡಿದರು.

ಪ್ರತಿಭಟನೆಯಲ್ಲಿ ಮಹದೇವ, ಚಿದಾನಂದ, ನಂದೀಶ್, ಆರ್ಮುಗ, ಅಂಬಿಕ, ಸರೋಜ ಭಾಗಿಯಾಗಿದ್ದರು.

ಬಿಕ್ಕೋಡಿಗೆ ಲಯನ್ಸ್ ರಾಜ್ಯಪಾಲರ ಭೇಟಿ

ವಿವಿಧ ಕ್ಷೇತ್ರಗಳಲ್ಲಿನ ಸಾಧಕರಿಗೆ ಸನ್ಮಾನ

• ಪ್ರಜೋದಯ ವರದಿ

ಅರೇಹಳ್ಳಿ: ಬೇಲೂರು ತಾಲ್ಲೂಕು ಬಿಕ್ಕೋಡಿನ ಶಿವಗಂಗಾ ಕಲ್ಯಾಣ ಮಂಟಪದಲ್ಲಿ ಲಯನ್ಸ್ ಸಂಸ್ಥೆಯ ವತಿಯಿಂದ ಜಿಲ್ಲಾ ರಾಜ್ಯಪಾಲರ ಅಧಿಕೃತ ಭೇಟಿ ಕಾರ್ಯಕ್ರಮ ಏರ್ಪಡಿಸಲಾಗಿತ್ತು. 317 ಡಿ ಜಿಲ್ಲೆಯ ರಾಜ್ಯಪಾಲ ಕುಡುಪಿ ಲ.ಅರವಿಂದ್ ಶೆಣೈ ದಂಪತಿಯನ್ನು ಮಹಿಳೆಯರು ಹೂಮಳೆ ಗರೆಯುವುದರ ಮೂಲಕ ಭವ್ಯ ಸ್ವಾಗತ ಕೋರಿದರು.

ಸಾವಯವ ಕೃಷಿಯಲ್ಲಿ ಸಾಧನೆಗೈದ ಎನ್.ಡಿ.ಮಂಜುನಾಥ್, ಜಿಲ್ಲಾ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ರಘು ಪಾಳ್ಯ, 14 ವರ್ಷದೊಳಗಿನ ವಾಲಿಬಾಲ್ ಪಂದ್ಯಾವಳಿಯಲ್ಲಿ 7 ಚಿನ್ನದ ಪದಕ ವಿಜೇತೆ ಬಿ.ಹೆಚ್.ರೋಹಿಣಿ ಅವರನ್ನು ಸನ್ಮಾನಿಸಲಾಯಿತು. ಗಣ್ಯರು ಲಯನ್ಸ್ ಲೋಗೋ ಇರುವ ಬಿಕ್ಕೋಡು ಲಯನ್ಸ್ ಸದಸ್ಯರ ನೂತನ ಟಿ-ಶರ್ಟ್ ಬಿಡುಗಡೆ ಗೊಳಿಸಿದರು.

ಲಯನ್ಸ್ ಸೇರ್ಪಡೆಯಾದ ಯಶ್ವಂತ್ ಅವರಿಗೆ ರಾಜ್ಯಪಾಲರು ಪ್ರತಿಜ್ಞಾ ವಿಧಿ ಬೋಧಿಸಿದರು. ಲಯನ್ಸ್ ಅಧ್ಯಕ್ಷ ಲತೇಶ್, ಪ್ರಾಂತೀಯ ಅಧ್ಯಕ್ಷ ಅಬ್ದುಲ್ ಲತೀಫ್, ವಲಯಾಧ್ಯಕ್ಷ ಚಾಮರಾಜ್, ಕಾರ್ಯದರ್ಶಿ ಪ್ರವೀಣ್, ಖಜಾಂಚಿ ಇ.ಎಲ್.ದೇವೇಂದ್ರ, ವಲಯ ರಾಯಭಾರಿ ದಿನೇಶ್, ಸದಸ್ಯರಾದ ಶಿವಕುಮಾರ್, ಬಸವರಾಜು, ಕಾಂತರಾಜು ಇತರರಿದ್ದರು.

ಗ್ರಾಮೀಣ ಮಕ್ಕಳಿಗೆ ಕಾನ್ವೆಂಟ್ ಮಟ್ಟದ ಗುಣಮಟ್ಟದ ಪ್ರಾಥಮಿಕ ಶಿಕ್ಷಣ | ಅರಕಲಗೂಡು ತಾಲ್ಲೂಕಿನಲ್ಲಿ ಯಶಸ್ವಿ

ಮಕ್ಕಳ ಮನೆ ಯೋಜನೆ: ಪೋಷಕರಿಂದ ಭಾರೀ ಸ್ಪಂದನೆ

• ಪ್ರಜೋದಯ ವರದಿ

ಅರಕಲಗೂಡು: ಗ್ರಾಮೀಣ ಮಕ್ಕಳಿಗೆ ಕಾನ್ವೆಂಟ್ ಮಟ್ಟದ ಗುಣಮಟ್ಟದ ಪ್ರಾಥಮಿಕ ಶಿಕ್ಷಣವನ್ನು ಸರ್ಕಾರಿ ಶಾಲೆಗಳಲ್ಲಿಯೇ ಒದಗಿಸುವ ಉದ್ದೇಶದಿಂದ ಪ್ರಾರಂಭವಾದ 'ಮಕ್ಕಳ ಮನೆ' ಯೋಜನೆ ಶನಿವಾರ ತಾಲ್ಲೂಕಿನಾದ್ಯಂತ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿದ್ದು, ಪೋಷಕರಿಂದ ಭಾರೀ ಸ್ಪಂದನೆ ವ್ಯಕ್ತವಾಗುತ್ತಿದೆ.

ಪ್ರಸ್ತುತ ಈ ಯೋಜನೆ ತಾಲೂಕಿನ ಹನ್ಯಾಳು ಗ್ರಾಮ ಸೇರಿದಂತೆ 18 ಗ್ರಾಮ ಪಂಚಾಯತ್ಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ಸುಮಾರು 450 ಕ್ಕೂ ಹೆಚ್ಚು ಮಕ್ಕಳು ಮತ್ತು ತರಗತಿಗಳಲ್ಲಿ ಶಿಕ್ಷಣ ಪಡೆಯುತ್ತಿದ್ದಾರೆ. ಮಕ್ಕಳಿಗೆ ಆಟದ ಮೂಲಕ ಕಲಿಕೆ, ಆಂಗ್ಲ ಭಾಷೆಯ ಪ್ರಾಥಮಿಕ ಪರಿಚಯ, ಕಥೆ ಮತ್ತು ಹಾಡುಗಳ ಮೂಲಕ ಬೋಧನೆ ಮುಂತಾದ ನವೀನ ವಿಧಾನಗಳನ್ನು ಅನುಸರಿಸಲಾಗುತ್ತಿದೆ. ಈ ಯೋಜನೆಯ ವಿಶೇಷತೆ ಎಂದರೆ, ಖಾಸಗಿ ಕಾನ್ವೆಂಟ್ ಶಾಲೆಗಳಲ್ಲಿ ಓದುತ್ತಿದ್ದ ಮಕ್ಕಳನ್ನು ಸಹ ಪೋಷಕರು ಸರ್ಕಾರಿ ಮಕ್ಕಳ ಮನೆ ಶಾಲೆಗಳಿಗೆ ದಾಖಲಾತಿ ಮಾಡಿಸುತ್ತಿರುವುದು. ವರ್ಷಾಂತ್ಯದಲ್ಲಿಯೂ ದಾಖಲಾತಿ ಹೆಚ್ಚಳವಾಗುತ್ತಿರುವುದು ಯೋಜನೆಯ ಗುಣಮಟ್ಟ ಮತ್ತು ವಿಶ್ವಾಸಾರ್ಹತೆಯನ್ನು ತೋರಿಸುತ್ತದೆ.

''ಮಕ್ಕಳ ಮನೆ'' ಯೋಜನೆಯು ಸರ್ಕಾರಿ ಶಿಕ್ಷಣ ವ್ಯವಸ್ಥೆಯ ಮೇಲಿನ ವಿಶ್ವಾಸವನ್ನು ಪುನಃಸ್ಥಾಪಿಸುವುದರ ಜೊತೆಗೆ, ಗ್ರಾಮೀಣ ಶಿಕ್ಷಣದಲ್ಲಿ ಮಹತ್ವದ ಬದಲಾವಣೆಯನ್ನು ತಂದಿದೆ. ಇಂತಹ ಮಾದರಿ ಯೋಜನೆಗಳನ್ನು ರಾಜ್ಯದಾದ್ಯಂತ ವಿಸ್ತರಿಸುವ ಅಗತ್ಯವಿದೆ ಎಂದು ಶಿಕ್ಷಣ ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಈ ಯೋಜನೆ ಅರಕಲಗೂಡು ತಾಲೂಕಿನ 18 ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಸುಮಾರು 450 ಮಕ್ಕಳಿಗೆ ಕಾನ್ವೆಂಟ್ ಶಿಕ್ಷಣ ನೀಡಲು ಈ ಕೆಳಕಂಡ ಗ್ರಾಮಗಳಲ್ಲಿ ಪ್ರಾರಂಭಿಸಲಾಗಿದೆ.

ಹನ್ಯಾಳು, ಲಕ್ಕೂರು, ಮಧುರನಹಳ್ಳಿ, ಕೇರಳಾಪುರ, ರಾಮನಾಥಪುರ, ಹಂಡ್ರಂಗಿ, ಹುಲಿಕಲ್, ಮಲ್ಲಿಪಟ್ಟಣ, ಕೋಟೆ ಅರಕಲಗೂಡು, ಬೈಚನಹಳ್ಳಿ, ಸಂತೆಮರೂರು, ಕಟ್ಟೇಪುರ, ದೊಡ್ಡಬೆಮ್ಮತ್ತಿ, ಕಾಳೇನಹಳ್ಳಿ, ಹೊನ್ನೇನಹಳ್ಳಿ ವಿಧಾನ ಸಭಾ ವ್ಯಾಪ್ತಿಯ ಹಳ್ಳಿ ಮೈಸೂರು ಹೋಬಳಿಯ ಒಡನಹಳ್ಳಿ, ಬಿದರಕ್ಕ, ಶ್ರವಣೂರು ಗ್ರಾಮಗಳಲ್ಲಿ ಅತ್ಯುತ್ತಮವಾಗಿ ಕಾರ್ಯ ನಿರ್ವಹಿಸುತ್ತಿದ್ದು, ಇತರೆ ಪೋಷಕರನ್ನು ಸಹ ಆಕರ್ಷಸುತ್ತಿದೆ.

ಮಕ್ಕಳ ಮನೆ ಅರಕಲಗೂಡಿನ ಹೆಮ್ಮೆ, ಶಿಕ್ಷಣದ ಹೊಸ ದಿಕ್ಕು: ಒಮ್ಮೆ ಖಾಸಗಿ ಕಾನ್ವೆಂಟ್ ಶಾಲೆಗಳತ್ತ ಮುಖ ಮಾಡುತ್ತಿದ್ದ ಪೋಷಕರು, ಇಂದು ಸರ್ಕಾರಿ ಶಾಲೆಗಳತ್ತ ವಿಶ್ವಾಸದಿಂದ ಮರಳುತ್ತಿರುವುದು ಈ ಯೋಜನೆಯ ಮಹತ್ವದ ಸಾಧನೆಯಾಗಿದೆ. ''ಮಕ್ಕಳ ಮನೆ'' ಮೂಲಕ ಗ್ರಾಮೀಣ ಮಕ್ಕಳಿಗೆ ಕಾನ್ವೆಂಟ್ ಮಟ್ಟದ ಗುಣಮಟ್ಟದ ಶಿಕ್ಷಣಒದಗಿಸಲಾಗುತ್ತಿದೆ.

ಶಾಸಕ ಮಂಜು ಅವರಿಂದ ಬುನಾದಿ: ಈ ಶಿಕ್ಷಣ ಚಳವಳಿಗೆ ದಿಕ್ಕು ತೋರಿದವರು ಮಾಜಿ ಸಚಿವರು ಹಾಗೂ ಅರಕಲಗೂಡು ಶಾಸಕ ಎ. ಮಂಜು.ಅವರ ದೃಷ್ಟಿ ಪ್ರತಿಯೊಬ್ಬ ಮಗುವಿಗೂ ಗುಣಮಟ್ಟದ ಶಿಕ್ಷಣ ದೊರೆಯಬೇಕೆಂಬು. ಅದು ಈ ಯೋಜನೆಯ ಬುನಾದಿಯಾಗಿದೆ.

ಕಾರ್ಯರೂಪಕ್ಕೆ ತಂದವರು ತಾರಾ ಎ.ಮಂಜು: ಮಕ್ಕಳ ಮನೆ ಯೋಜನೆಯ ಕನಸನ್ನು ಕಾರ್ಯರೂಪಕ್ಕೆ ತಂದವರು ತಾರಾ ಎ. ಮಂಜು ಅವರು,ಮಾಜಿ ಜಿಲ್ಲಾ ಪಂಚಾಯತ್ ಸದಸ್ಯರು ಆಗಿರುವ ತಾರಾ ಮಂಜು ಅವರು, ಆಯಾ ಗ್ರಾಮಗಳ ಸರ್ಕಾರಿ ಶಾಲೆಯಲ್ಲಿಓದಿ ಬದುಕು ಕಟ್ಟಿಕೊಂಡಿರುವ ಹಿರಿಯ ವಿದ್ಯಾರ್ಥಿಗಳ ತಂಡದೊಂದಿಗೆ ಮಕ್ಕಳಿಗೆ ಪ್ರೀತಿ, ಶಿಸ್ತು ಮತ್ತು ಮೌಲ್ಯಾಧಾರಿತ ಕಲಿಕಾ ವಾತಾವರಣವನ್ನು ಕಲ್ಪಸಿಕೊಟ್ಟಿದ್ದಾರೆ.

ಪ್ರೇರಕ ಶಕ್ತಿ ಡಾ.ಅಶೋಕ್ ಹನ್ಯಾಳ್: ಈ ಹಿಂದೆ ತಾಲೂಕು ಪಂಚಾಯಿತಿಗೆ ಕಾರ್ಯನಿರ್ವಹಕ ಅಧಿಕಾರಿಯಾಗಿಕಾರ್ಯನಿರ್ವಹಿಸಿದ ಡಾ.ಅಶೋಕ್ ಹನ್ಯಾಳ್ ಅವರು ಶಾಸಕ ಮಂಜು ಮತ್ತು ಅವರ ಪತ್ನಿ ತಾರಾಮಂಜು ಅವರ ಕನಸನ್ನು ಸಹಕಾರಗೊಳಿಸುವ ನಿಟ್ಟಿನಲ್ಲಿ ಮಕ್ಕಳ ಮನೆ ಸಮರ್ಪಕ ಅನುಷ್ಠಾಣಕ್ಕೆ ಪ್ರೇರಕ ಶಕ್ತಿಯಾಗಿ ನಿಂತು ಸಹಕಾರ ನೀಡುತ್ತಿದ್ದಾರೆ.

ಇವರ ಮೂಲ ಆಶಯದಂತೆ ಹನ್ಯಾಳು ಗ್ರಾಮದಲ್ಲಿ ಪ್ರಥಮ ಮಕ್ಕಳ ಮನೆ ಪ್ರಾರಂಭಿಸಿ, ಇಂದು 18 ಗ್ರಾಮ ಪಂಚಾಯತ್ ವ್ಯಾಪ್ತಿಗೆ ವಿಸ್ತರಿಸಿದ ಪ್ರೇರಕ ಶಕ್ತಿಯಾಗಿದ್ದಾರೆ.

ಪೋಷಕರಿಂದ ಮೆಚ್ಚುಗೆ: ಪ್ರಸ್ತುತ ಸುಮಾರು 450ಕ್ಕೂ ಹೆಚ್ಚು ಮಕ್ಕಳು ಈ ಯೋಜನೆಯಡಿ ಶಿಕ್ಷಣ ಪಡೆಯುತ್ತಿದ್ದು, ಮಕ್ಕಳ ಸ್ನೇಹಿ ವಾತಾವರಣ, ಮತ್ತು ಮೌಲ್ಯಾಧಾರಿತ ಶಿಕ್ಷಣದಿಂದ ಪೋಷಕರ ವಿಶ್ವಾಸವನ್ನು ಗಳಿಸಿದೆ.

ಹೊನ್ನೇನಹಳ್ಳಿ ಮಕ್ಕಳ ಮನೆ ಶಾಲೆಗೆ ಬರಪೂರ ಕೊಡುಗೆ : ತಾಲೂಕಿನ ಹೊನ್ನೇನಹಳ್ಳಿ ಸರಕಾರಿ ಶಾಲೆ ಮತ್ತು ಮಕ್ಕಳ ಮನೆ ಶಾಲೆಗೆ ಐಟಿಸಿ ಕಂಪನಿಯಿಂದ ಹೈಟೆಕ್ ಶೌಚಾಲಯ, ಕುಡಿಯುವ ನೀರು, ಇತರೆ ಪರಿಕರಗಳನ್ನು ಒದಗಿಸಲಾಗಿದೆ.

ಗುಣಮಟ್ಟದ ಶಿಕ್ಷಣಕ್ಕೆ ಬುನಾದಿ

ಮಕ್ಕಳ ಮನೆ ಮಾದರಿಯಲ್ಲಿ ಪ್ರತಿ ಗ್ರಾಪಂ ವ್ಯಾಪ್ತಿಯಲ್ಲಿ ಶಾಲೆ ಆರಂಭಿಸಲು ಸಿದ್ಧತೆ ನಡೆದಿದೆ.ನನ್ನ ಕುಟುಂಬ ಈ ಮಕ್ಕಳ ಮನೆಯ ಶಾಲೆಯ ಸಂಪೂರ್ಣ ಜವಾಬ್ದಾರಿಯನ್ನು ತೆಗೆದುಕೊಂಡು ಸಹಕಾರ ನೀಡುತ್ತಿದೆ.ಈ ಕಾರ್ಯವನ್ನು ಎಲ್ಲಾ ಚುನಾಯಿತ ಪ್ರತಿನಿಧಿಗಳು ತಮ್ಮ ತಮ್ಮ ಕ್ಷೇತ್ರಗಳಲ್ಲಿ ಅನುಷ್ಠಾನಗೊಳಿಸಿ, ಬಡ ಹಾಗೂ ಹಿಂದುಳಿದ ವರ್ಗದ ಮಕ್ಕಳಿಗೆ ಗುಣಮಟ್ಟದ ಶಿಕ್ಷಣದ ದೃಢವಾದ ಬುನಾದಿ ಹಾಕುವಂತೆ ನಾನು ಮನವಿ ಮಾಡುತ್ತೇನೆ.

–ಎ.ಮಂಜು, ಶಾಸಕರು.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019

CMYK CMYK CMYK CMYK